APPENDIX A.

I.

To

T. ANANDA ROW, Esq., B.A., C.I.E.,

Dewan of Mysore.

Sir,

On behalf of the Kolar Gold Field Mining Board, I have the honor to convey to you their very sincere thanks for being again permitted to send a representative to this Assembly.

The Boards of Directors and Managers of the several Companies in London as well as the Local Board in India fully appreciate that the success which has attended their operations on the Kolar Gold Field is due, in no small measure, to the help which has from its commencement been so liberally extended to the industry by His Highness' Government to whose magnificent enterprise in installing the famous Cauvery Electrical Power equipment and the Bethamangalam water-supply, they are so much indebted for the economical working of the Mines and the health of the workpeople and their dependents. They deem themselves particularly fortunate, Sir, that their sphere of operations lies within the dominions of His Highness the Maharaja, where so splendid an example is set to the nations and peoples of the East in the encouragement of progress.

Before proceeding to submit to you our few wants, I would offer respectfully, through you, Sir, our heartiest congratulations to Prince Narasaraj Wodeyar, Yuvaraja of Mysore, on being the recipient of the Coronation Durbar Honor of Knight Commander of the Indian Empire conferred upon him by His Majesty the King-Emperor.

Augmentation of police force.—On the recommendation of the Inspector-General of Police, His Highness' Government have recently been pleased to sanction a substantial augmentation of the Kolar Gold Field Police. For this increase, which will add materially to the efficiency of the Force, particularly in the detection of house burglaries and petty larcenies, the Board are very grateful.

Police Act.—We would again respectfully point out that Section 56 of this Regulation is practically inoperative on the Kolar Gold Field. We are informed that the ordinary law procedure is cumbersome, and that the Administrative machinery for the prompt despatch of cases is not available. May we suggest the authorization of a "Petty Case Charge Sheet" as a means of meeting the needs of the Field in this respect.

Mysore Mines Regulation, 1906.—The problem of dealing effectually with the bad characters who infest the Mines is still as difficult as ever. It has previously been represented to you, Sir, that the *notices-to-quit* served by the Mines Superintendents severally and independently do not satisfactorily meet the situation. Under the present system "undesirables" migrate from one Camp to another with impunity, and there is, so far as we can see, only one way of coping with the difficulty and that is, by the District Superintendent of Police being permitted to sign the notices which shall be in force over the whole of the Mining area.

Public health.—We are glad to say that the cordial relations which exist between the Government medical staff and our own do much to promote harmonious co-operation in all matters pertaining to the public health of the Field.

Epidemic diseases.—In the year 1911-12 plague was prevalent on the Mining and Sanitary Board areas, and during that time the whole of the bacteriological work for the Government Medical Officer of Health was done in the Companies' Laboratory.

We wish to express our thanks for the Sanitary Board Laboratory, the equipment of which has kindly been sanctioned.

The bacteriological and analytical work of the Sanitary Board area can now be dealt with directly by the Government Medical Officer of Health, and thereby much valuable time can be saved in the detection and prevention of infectious diseases.

Bethamangalam Water Distribution Tank at Champion Reef.—We regret to be again compelled to draw your attention to the urgent need of covering the Bethamangalam Water Distribution Tank, Champion Reef.

The water so carefully filtered at Bethamangalam is exposed to the many contaminations of the air before it is distributed to the thousands of consumers who depend on this supply.

Government General Hospital.—We beg to remind you that the Europeans and Anglo-Indians who are only dependents of the Companies' empolyees, and who frequent the Government General Hospital, are still without the separate accommodation you were good enough to promise them in 1909.

Maternity Hospital.—We are glad to notice that the work of converting the building purchased for this hospital is now in hand.

In conclusion, Sir, I beg to thank you for having so kindly received this address, and trust that the several representations put before you will merit your favourable consideration.

C. H. RICHARDS,
Acting Chairman, K. G. F.

Translation of the above.

I

ಮೈಸೂರು ಸಂಸ್ಥಾನದ ದಿವಾನರವೆರಾದ ಟಿ. ಆನಂದರಾವ್, ಎಸ್ಕ್ವೈರ್,
ಬಿ. ಎ., ಸಿ. ಐ. ಇ., ಯವರ ಸನ್ನಿಧಾನಂಗಳಿಗೆ.

ಮಹಾಸ್ವಾಮಿ.

ಕೋಲಾರದ ಚಿನ್ನದಗಣಿಗಳ ಬೋರ್ಡಿನವರು ಈ ಸಭೆಗೆ ತಮ್ಮ ವರ್ಷವೂ ತಮ್ಮ ಪ್ರತಿನಿಧಿಯನ್ನು ಕಳುಹಿಸುವಂತೆ ಅವರಿಗೆ ಅವಕಾಶಕೊಟ್ಟದ್ದಕ್ಕಾಗಿ, ಅವರ ಮನಃಪೂರ್ವಕವಾದ ವಂದನೆಗಳನ್ನು ಅವರ ಪರವಾಗಿ ನಾನು ಅರ್ಪಿಸುತ್ತೇನೆ.

ಕೋಲಾರದ ಚಿನ್ನದ ಗಣಿಗಳ ಪ್ರದೇಶದಲ್ಲಿ ತಮ್ಮ ಗಣಿಗಳ ಕೆಲಸವು ಫಲಕಾರಿಯಾಗಿರುವುದಕ್ಕೆ, ಈ ಗಣಿಗಳ ಕೆಲಸವು ಉಪಕ್ರಮವಾದ ಕಾಲದಿಂದಲೂ ಅದಕ್ಕೆ ಶ್ರೀಮನ್ಮಹಾರಾಜರವರ ಸರ್ಕಾರದವರು ವಿಶೇಷವಾಗಿ ಸಹಾಯ ಮಾಡುತ್ತಿರುವುದೇ ಮುಖ್ಯ ಕಾರಣವಾಗಿರುವುದೆಂಬ ಅಂಶವನ್ನು ಲಂಡನಿನಲ್ಲಿರುವ ಅನೇಕ ಕಂಪೆನಿಗಳ ಡೈರೆಕ್ಟರುಗಳ ಬೋರ್ಡಿನವರೂ ಮ್ಯಾನೇಜರುಗಳ್ಳೂ ಮತ್ತು ಇಂಡಿಯ ದೇಶವಲ್ಲಿರುವ ಲೋಕಲ್ ಬೋರ್ಡಿನವರೂ ಸಹ ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಇದಲ್ಲದೆ ಬಡಜನ ಸಾಹಸಸಟ್ಟು ಕಾವೇರೀ ವಿದ್ಯುಚ್ಛಕ್ತಿ ಸ್ಥಾಪನೆಯ ಏರ್ಪಾಡನ್ನೂ ಜೇತಮೆಂಗಲದ ಕೆರೆಯಿಂದ ನೀರು ಸರಬರಾಯಿ ಮಾಡುವ ಏರ್ಪಾಡನ್ನೂ ನಡಿಸಿ, ತನ್ಮೂಲಕ ಗಣಿಗಳ ಕೆಲಸವು ಮಿತವ್ಯಯದಿಂದ ನಡೆಯುವಂತೆಯೂ, ಗಣಿಗಳ ಕೆಲಸಗಾರರಿಗೂ ಅವರ ಕಡೆಯ ಜನಗಳಿಗೂ ಆರೋಗ್ಯವುಂಟಾಗುವಂತೆಯೂ ಅನುಕೂಲಪಡಿಸಿಕೊಟ್ಟದ್ದಕ್ಕಾಗಿ ಅವರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಬಹಳ ಕೃತಜ್ಞರಾಗಿದ್ದಾರೆ. ಮೇಲ್ಕಂಡ ಬೋರ್ಡಿನವರೂ ಮ್ಯಾನೇಜರುಗಳೂ, ತಮ್ಮ ಗಣಿಯ ಉದ್ಯೋಗವನ್ನು ಶ್ರೀಮನ್ಮಹಾರಾಜರವರ ರಾಜ್ಯದಲ್ಲಿ ನಡಿಸುವ ಸಂಭವವುಂಟಾಯಿತೆಂತಲೂ, ಇದರಿಂದ ಸಾಮಾನ್ಯವಾಗಿ ಪುರೋವೃದ್ಧಿಗೆ ಮಾಡಬೇಕಾದ ಪ್ರಯತ್ನಗಳ ವಿಷಯದಲ್ಲಿ ಪ್ರಾಚ್ಯ ದೇಶೀಯರಿಗೆ ಸರ್ವೋತ್ತಮವಾದ ನಿದರ್ಶನವನ್ನು ತೋರಿ ಕೊಟ್ಟಂತಾಯಿತೆಂತಲೂ, ಇದು ತಮ್ಮ ಅಪೂರ್ವ ಭಾಗ್ಯೋದಯವೆಂತಲೂ ಭಾವಿಸುತ್ತಾರೆ.

ನಮಗೆ ಅವಶ್ಯಕವಾಗಿರುವ ಕೆಲವು ಅಂಶಗಳನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಮೊದಲು, ಮೈಸೂರು ಶ್ರೀಮನ್ಮಹಾರಾಜರವರ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹಾದುರವರಿಗೆ ಕಾರೊನೇರ್ಷನ್ ದರ್ಬಾರಿನ ಮಹೂರ್ತಾರ್ಥವಾಗಿ ಶ್ರೀಮಚ್ಚಕ್ರವರ್ತಿಯವರು ದಯಪಾಲಿಸಿದ ಕೆ. ಸಿ. ಐ. ಇ. ಎಂಬ ಬಿರುದು

52

ಲಭಿಸಿದುವಕ್ಕಾಗಿ ನಮ್ಮ ಅಭಿನಂದನಗಳನ್ನೂ ಶ್ರೀಮದ್ಯುವರಾಜರವರಿಗೆ ತಮ್ಮ ಮೂಲಕ ವಿನಯ ಪುರಸ್ಸರವಾಗಿ ಸಮರ್ಪಿಸಲು ಅಪೇಕ್ಷಿಸುತ್ತೇವೆ, ಮಹಾಸ್ವಾಮಿ.

ಪೊಲೀಸ್ ಶಿಬ್ಬಂದಿಯನ್ನ ಹೆಚ್ಚಿಸಿದುದು.—ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಶಿಫಾರ್ಸಿನಮೇಲೆ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಕೋಲಾರದ ಚಿನ್ನದಗಣಿಗಳ ಪೋಲೀಸ್ ಶಿಬ್ಬಂದಿಯನ್ನು ಬಹುಮಟ್ಟಿಗೆ ಹೆಚ್ಚಿಸುವಬಗ್ಗೆ ಈಚೆಗೆ ಹುಕುಂ ಮಾಡಿರುತ್ತಾರೆ. ಹೀಗೆ ಶಿಬ್ಬಂದಿಯನ್ನು ಹೆಚ್ಚಿಸಿದುದರಿಂದ, ಮುಖ್ಯವಾಗಿ ಕನ್ನಗಳವುಗಳನ್ನೂ ಚಿಲ್ಲರೇ ಚೋರಿಗಳನ್ನೂ ಪತ್ತೆಮಾಡುವುದಕ್ಕೆ ಹೆಚ್ಚು ಸಾಧನವುಂಟಾಯಿತೆಂದು ಜೋರ್ಡಿನವರು ಬಹಳ ಕೃತಜ್ಞರಾಗಿರುತ್ತಾರೆ.

ಪೊಲೀಸ್ ಆಕ್ಟು.—ಈ ರೆಗ್ಯುಲೇಷನಿನ 56ನೆಯ ಪ್ರಕರಣದಿಂದ ಕೋಲಾರದ ಚಿನ್ನದ ಗಣಿಗಳಲ್ಲಿ ಸೆಸ್ತು ತಃ ಏನೂ ಪ್ರಯೋಜನವಿಲ್ಲವಾಗಿದೆಯೆಂಬ ಅಂಶವನ್ನು ಪುನಃ ಅರಿಕೆಮಾಡಬೇಕಾಗಿದೆ. ಸಾಮಾನ್ಯವಾಗಿ ಕಾನೂನಿನಮೇರೆಗೆ ನಡೆವಳಿಕೆಯನ್ನು ನಡಿಸುವುದು ಕಷ್ಟಕರವಾಗಿರುವುದೆಂತಲೂ ಮೊಕದ್ದಮೆಗಳನ್ನು ಶೀಘ್ರವಾಗಿ ಫೈಸಲ್ಮಾಡುವುದಕ್ಕೆ ತಕ್ಕ ಸಾಧನಗಳು ಸಿದ್ಧವಾಗಿಲ್ಲವೆಂತಲೂ ತಿಳಿಯಬರುತ್ತದೆ. ಆದಕಾರಣ ಪೆಟೀ ಕೇಸ್ ಚಾರ್ಜ್‌ಷೀಟ್ "ಸಣ್ಣ ಮೊಕದ್ದಮೆಗಳಲ್ಲಿ ತಪ್ಪಿತಗಳನ್ನು ಆರೋಪಿಸುವುದಕ್ಕೆ ಪಟ್ಟಿಯನ್ನು" ಉಪಯೋಗಿಸುವ ಅಧಿಕಾರವನ್ನು ಕೊಟ್ಟರೆ ಈ ವಿಷಯದಲ್ಲಿ ಗಣಿಯವರಿಗೆ ಇರುವ ನ್ಯೂನತೆಯನ್ನು ಸರಿಪಡಿಸುವ ಸಾಧನವುಂಟಾಗುವುದೆಂದು ನಾವು ಸೂಚಿಸುತ್ತೇವೆ.

1906ನೆಯ ಇಸವಿಯ ಮೈಸೂರು ಗಣಿಗಳ ರೆಗ್ಯುಲೇಷನ್.—ಗಣಿಗಳಲ್ಲಿ ಸೇರಿಕೊಂಡು ತೊಂದರೆಯನ್ನುಂಟು ಮಾಡುವ ಕೆಟ್ಟಜನಗಳ ಕಾಟವನ್ನು ಪೂರಾ ಅಡಗಿಸುವುದಕ್ಕೆ ಏನುಮಾಡಬೇಕೆಂಬ ವಿಚಾರವು ಇನ್ನೂ ಬಗೆಹರಿಯದೆ ಇದ್ದಂತೆಯೇ ಇದೆ. "ಸ್ಥಳವನ್ನು ಬಿಟ್ಟು ಹೋಗಬೇಕೆಂದು" ಗಣಿಗಳ ಸೂಪರ್‌ಟೆಂಡೆಂಟುಗಳು ಪ್ರತ್ಯೇಕವಾಗಿಯೂ ಸ್ವತಂತ್ರವಾಗಿಯೂ ನೋಟೀಸನ್ನು ಕೊಡುವುದರಿಂದ ಅಷ್ಟು ತೃಪ್ತಿಕರವಾದ ಪ್ರಯೋಜನ ಉಂಟಾಗುವುದಿಲ್ಲವೆಂದು ತಮ್ಮಲ್ಲಿ ಅರಿಕೆಮಾಡಿಕೊಂಡಿರುತ್ತದೆ, ಮಹಾಸ್ವಾಮಿ.

ಈಗಿನ ಪದ್ಧತಿಯ ಮೇರೆಗೆ, ಕಟ್ಟಡತೆಯ ಜನಗಳು ಒಂದು ಕ್ಯಾಂಪಿನಿಂದ ಮತ್ತೊಂದು ಕ್ಯಾಂಪಿಗೆ ನಿರ್ಭಯವಾಗಿ ಹೋಗಿ ವಾಸಮಾಡುತ್ತಾರೆ. ಇದನ್ನು ತಪ್ಪಿಸಬೇಕಾದರೆ, ನೋಟೀಸುಗಳಿಗೆ ಡಿಸ್ಟ್ರಿಕ್ಟ್ ಸೂಪರ್‌ಟೆಂಡೆಂಟುಗಳು ದಸ್ತಖತ್ ಮಾಡುವಂತೆ ಅವರಿಗೆ ಅಧಿಕಾರವನ್ನು ಕೊಟ್ಟು, ಅಂಥಾ ನೋಟೀಸುಗಳು ಗಣಿಗಳ ಪ್ರದೇಶಕ್ಕೆಲ್ಲಾ ಅನ್ವಯಿಸುವಂತೆ ಮಾಡುವುದೊಂದೇ ನಮಗೆ ತಿಳಿದ ಮಟ್ಟಿಗೆ ಇದಕ್ಕೆ ತಕ್ಕ ಉಪಾಯವಾಗಿರುತ್ತದೆ.

ಜನಾರೋಗ್ಯ.—ವೈದ್ಯ ಇಲಾಖೆಗೆ ಸಂಬಂಧಪಟ್ಟ ಸರ್ಕಾರೀ ಶಿಬ್ಬಂದಿಗಳೂ ನಮ್ಮ ಶಿಬ್ಬಂದಿಗಳೂ ಅನ್ಯೋನ್ಯ ಮೈತ್ರೀ ಭಾವದಲ್ಲಿರುವುದು, ಗಣಿಗಳ ಜನಾರೋಗ್ಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಪರಸ್ಪರ ಸಹಾಯವನ್ನು ವೃದ್ಧಿಪಡಿಸುವುದಕ್ಕೆ ಬಹುಮಟ್ಟಿಗೆ ಸಾಧಕವಾಗಿರುತ್ತದೆಯೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಸಾಂಕ್ರಾಮಿಕ ಜಾಡ್ಯಗಳು.—1911—12ನೆಯ ಸಾಲಿನಲ್ಲಿ ಮೈನಿಂಗ್ ಮತ್ತು ಸ್ಯಾನಿಟೆರಿ ಬೋರ್ಡುಗಳ ಪ್ರದೇಶಗಳಲ್ಲಿ ಪ್ಲೇಗು ಜಾಡ್ಯವು ಪ್ರಾಪ್ತವಾಗಿತ್ತು. ಆ ಕಾಲದಲ್ಲಿ ಸರ್ಕಾರೀ ಹೆಲ್ತ್ ಆಫಿಸರು ಮಾಡಬೇಕಾದ ಪರಮಾಣುರೂಪ ಕ್ರಿಮಿಶೋಧನಾಕಾರ್ಯವೆಲ್ಲವನ್ನೂ ಕಂಪಿನಿಯವರ ಶೋಧನಾಲಯದಲ್ಲಿಯೇ ನಡಿಸಲಾಯಿತು.

ಸ್ಯಾನಿಟೆರಿ ಬೋರ್ಡಿನ ಶೋಧನಾಲಯಕ್ಕೆ ಬೇಕಾದ ಉಪಕರಣಗಳನ್ನು ಒದಗಿಸುವ ಬಗ್ಗೆ ಹುಕುಂ ಮಾಡಿರುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಸ್ಯಾನಿಟೆರಿ ಬೋರ್ಡಿನ ಪ್ರದೇಶದ ಪರಮಾಣುರೂಪ ಕ್ರಿಮಿಶೋಧನಾಕಾರ್ಯವನ್ನೂ ವಸ್ತುಗಳ ಪೃಥಕ್ಕರಣ ಕಾರ್ಯವನ್ನೂ ಸಹ ಈಗ ಸರ್ಕಾರದ ಮೆಡಿಕಲ್ ಹೆಲ್ತ್ ಆಫಿಸರೇ ಮಾಡಬಹುದಾಗಿರುವುದರಿಂದ ಸಾಂಕ್ರಾಮಿಕ ಜಾಡ್ಯಗಳನ್ನು ಕಂಡು ಹಿಡಿಯುವುದರಲ್ಲಿಯೂ ಅವುಗಳು ಬಾರದಂತೆ ನಿರೋಧಿಸುವುದರಲ್ಲಿಯೂ ಕಾಲವು ಬಹುಮಟ್ಟಿಗೆ ಉಳಿಯಬಹುದಾಗಿದೆ.

ಬೇತಮಂಗಲದ ನೀರಿನ ಸರಬರಾಯಿಗಾಗಿ ಛಾಂಪಿಯನ್ ರೀಫಿನಲ್ಲಿ ಏರ್ಪಡಿಸಿರುವ ಕೆರೆ.—ಬೇತಮಂಗಲದ ನೀರಿನ ಸರಬರಾಯಿಗಾಗಿ ಛಾಂಪಿಯನ್ ರೀಫಿನಲ್ಲಿ ಕಟ್ಟಿರುವ ಕೆರೆಯ ಆವರಣವನ್ನು ಅತಿ ಕ್ಷಿಪ್ರದಲ್ಲಿಯೇ ಮಾಡಿಸಬೇಕಾದಾದುದರ ಆವಶ್ಯಕತೆಯನ್ನು ಪುನಃ ತಮ್ಮ ಅವಧಾನಕ್ಕೆ ತರಬೇಕಾಗಿದೆ.

ಈ ನೀರಿನ ಸರಬರಾಯಿಯನ್ನೇ ಸಾವಿರಾರು ಜನರು ನಂಬಿಕೊಂಡಿರುತ್ತಾರೆ. ಈ ನೀರನ್ನು ಬೇತಮಂಗಲದಲ್ಲಿ ಅಪ್ಪ ಜಾಗರೂಕತೆಯಿಂದ ಕೋಧಿಸಿ ಮುಂದಕ್ಕೆ ಬಿಟ್ಟರೂ, ಗಣಿಯಲ್ಲಿರುವ ಸರಬರಾಯಿ ಕೆರೆಗೆ ಆವರಣವಿಲ್ಲದಿರುವುದರಿಂದ ಆ ಸಾವಿರಾರು ಮಂದಿಗೆ ಅದನ್ನು ಪಂಚುವುದರೊಳಗಾಗಿ ಗಾಳಿಯಲ್ಲಿರುವ ದೋಷಗಳು ಅದರಲ್ಲಿ ಸೇರಿಹೋಗಲಾಸ್ಪದವುಂಟಾಗಿರುತ್ತದೆ.

ಸರ್ಕಾರೀ ಜನರಲ್ ಆಸ್ಪತ್ರೆ.—ಕಂಪೆನಿಗಳ ನೌಕರರ ಆಶ್ರಯದಲ್ಲಿದ್ದು ಕೊಂಡು ಈ ಆಸ್ಪತ್ರೆಗೆ ಪದೇ ಪದೇ ಚಿಕಿತ್ಸೆಗಾಗಿ ಹೋಗುತ್ತಿರುವ ಯೂರೋಪಿಯರ್ ಮತ್ತು ಆಂಗ್ಲೋ ಇಂಡಿಯರ್ ಜನರಿಗೆ ಪ್ರತ್ಯೇಕವಾದ ಸ್ಥಳವನ್ನು ಏರ್ಪಡಿಸಿಕೊಡುವುದಾಗಿ 1909ನೆಯ ಸಾಲಿನಲ್ಲಿ ಅಪ್ಪಣೆ ಕೊಡಿಸಲಾಯಿತು. ಅದನ್ನು ಇನ್ನೂ ಏರ್ಪಡಿಸಿರುವುದಿಲ್ಲವಾದಕಾರಣ ಆ ವಿಷಯವನ್ನು ತಮ್ಮ ಅವಧಾನಕ್ಕೆ ತಂದಿರುತ್ತೇವೆ.

ಹೆರಿಗೆಯ ಆಸ್ಪತ್ರೆ.—ಈ ಆಸ್ಪತ್ರೆಗಾಗಿ ಕೊಂಡುಕೊಂಡ ಕಟ್ಟಡವನ್ನು ಅದಕ್ಕಾಗಿ ಅನುಕೂಲಪಡಿಸುವ ಕೆಲಸವನ್ನು ಈಗ ಕೈಗೊಂಡಿರುವುದನ್ನು ಕಂಡು ನಾವು ಸಂತೋಷಿಸುತ್ತೇವೆ.

ಈ ಅಭಿನಂದನ ಪತ್ರಿಕೆಯನ್ನು ತಾವು ದಯವಿಟ್ಟು ಸ್ವೀಕರಿಸುವುದಕ್ಕಾಗಿ ತಮಗೆ ನಾನು ವಂದಿಸುತ್ತೇನೆ, ಅಲ್ಲದೆ, ಈ ಪತ್ರಿಕೆಯಲ್ಲಿ ಅರಿಕೆ ಮಾಡಿಕೊಂಡಿರುವ ಅನೇಕ ಆಹವಾಲುಗಳನ್ನು ನಮಗೆ ಅನುಕೂಲವಾಗುವಂತೆ ಪರ್ಯಾಲೋಚಿಸಲಾಗುವುದೆಂದು ನಂಬಿರುತ್ತೇನೆ—ವೆ. ಹಾಸ್ಯಾಮಿ.

ಸಿ. ಎಚ್. ರಿಚರ್ಡ್ಸ್,
ಆಕ್ಟಿಂಗ್ ಚೇರ್ಮನ್.
ಕೋಲಾರ್ ಗೋಲ್ಡ್ ಫೀಲ್ಡ್.

II.

To

T. ANANDA ROW, Esq., B.A., C.I.E.,

Dewan of Mysore.

SIR,

It is once again my privilege as the representative of the South Mysore Planters' Association to congratulate the Government of His Highness the Maharaja upon the steady advance in the material welfare of the State and the sustained progress made in the various departments of its administration as evinced by the progressive measures already adopted or in contemplation for the further development of Mysore and its resources which have for their object the increase of general prosperity and contentment.

Foremost among these evidences of foresight are the establishment of an Economic Survey and the decision placing the Agricultural Department on a thoroughly sound workable and scientific basis under the direction of a recognized expert whose services have already clearly indicated the beneficial results obtainable by skilled direction and research.

While thanking the Government for having modified the Rubber Land Rules issued on the 28th September 1906 by reducing the tax to Rs. 2 per acre on land taken up before the 30th June 1908, I desire to point out that as Government in the same order indicated their intention to grant further rubber land on permanent tenure on an assessment of Rs. 1-8 per acre similar to coffee land, I venture to hope that it will be found possible to extend a similar concession to those who may have already acquired coffee land from others who have hitherto held them on the "30-year revision of assessment tenure," without having to pay 30 years or more arrears of the difference of tax upon land that was previously in the possession and enjoyment of others.

I am only reiterating the representations already made to Lord Lansdowne when Viceroy, when I express the confirmed opinion that Mangalore being the natural out-let for the products of this State, a line leading to any other port would fail to divert the large trade which exists with that place, or meet the growing requirements of the country generally.

I would further give expression to the matured opinion, that however the railways are extended in this State, the full benefit derivable from them will never be realized until a direct line to Mangalore is available.

There are persistent reports that you, Sir, are about to retire from the Dewanship of Mysore, the high offices of which you have discharged with such conspicuous ability to the lasting benefit of the Province, its inhabitants and numerous important interests.

I desire on behalf of the South Mysore Planters' Association to assure you that the Planting Community is second to none in its high appreciation of all you have done for the welfare of Mysore, not only as the Prime-Minister of His Highness the Maharaja but as an Officer who has served this State so well in almost every important appointment in the gift of its administration.

W. L. CRAWFORD,
Representative of the South Mysore Planters' Association.

Translation of the above.

II.

ಮೈಸೂರು ಸಂಸ್ಥಾನದ ದಿವಾನರವೆರಾದ ಶ್ರೀಮರ್ ಟಿ. ಆನಂದರಾವ್, ಬಿ. ಎ., ಸಿ. ಐ. ಇ. ಯವರ ಸನ್ನಿಧಿಯಲ್ಲಿ.

ಈ ಸಂಸ್ಥಾನದ ಸಂಪತ್ತು ವಿಕರೀತಿಯಾಗಿ ಅಭಿವೃದ್ಧಿಗೆ ಬರುತ್ತಿರುವ ವಿಷಯದಲ್ಲಿಯೂ, ಪ್ರಜೆಗಳಿಗೆ ಸುಖವನ್ನೂ ತೃಪ್ತಿಯನ್ನೂ ಹೆಚ್ಚಿಸಬೇಕೆಂಬ ಉದ್ದೇಶದೊಡನೆ ಈ ಸಂಸ್ಥಾನದ ಪುರೋವೃದ್ಧಿಯನ್ನೂ, ವ್ಯಾಪ್ತೋತ್ಪತ್ತಿ ಸಾಧನಗಳನ್ನೂ, ಮತ್ತಷ್ಟು ಪುಷ್ಟೀಕರಿಸುವುದಕ್ಕೋಸ್ಕರ ಈಗಾಗಲೇ ಸರ್ಕಾರದವರು ಅನುಸರಿಸಿರುವ ಅಥವಾ ಮುಂದೆ ಅನುಸರಿಸಬೇಕೆಂದಿರುವ ಉತ್ಕೃಷ್ಟವಾದ ವಿಚಾರಣೆಗಳಿಂದ ನಿದರ್ಶನಕ್ಕೆ ಬರುತ್ತಿರುವ ರಾಜ್ಯಾಂಗದ ನಾನಾ ಇಲಾಖೆಗಳಲ್ಲಿ ವಿಚ್ಛಿತ್ತಿಯಿಲ್ಲದೆ ನಡೆದುಬಂದಿರುವ ಅಭಿವೃದ್ಧಿಯ ವಿಷಯದಲ್ಲಿಯೂ ಸಹ ಶ್ರೀಮರ್ಮಹಾರಾಜಾ ಸಾಹೇಬ್ ಬಹಾದುರವರ ಸರ್ಕಾರದವರಿಗೆ, ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದ ಪ್ರತಿನಿಧಿಯಾಗಿ ನಾನು ಈ ವೇಳೆದಲ್ಲಿಯೂ ಅಭಿನಂದನವನ್ನು ಸಮರ್ಪಿಸುವ ಗೌರವವನ್ನು ಪಡೆದಿರುತ್ತೇನೆ.

ದೂರದೃಷ್ಟಿಯಿಂದ ಮಾಡಿದ ಅಂತಹ ಉತ್ಕೃಷ್ಟಗಳಾದ ವಿಚಾರಣೆಗಳ ಪೈಕಿ ಮುಖ್ಯವಾದುವುಗಳೂ ಯಾವುವೆಂದರೆ:—(1) ಎಕನಾಮಿಕ್ ಸರ್ವೆಯನ್ನು ವಿಚಾರಿಸಿರುವುದು; (2) ವ್ಯವಸಾಯಕ್ಕೆ, ದೋಷರಹಿತವಾಗಿಯೂ ಅನುಸರಿಸಲು ಸಾಧ್ಯವಾಗಿಯೂ ಕಾಸ್ತ್ರೀಯವಾಗಿಯೂ ಇರುವ ಮಾರ್ಗವನ್ನು ಕಲ್ಪಿಸಿ, ಆ ಇಲಾಖೆಯನ್ನು ವ್ಯವಸಾಯ ಕಾಸ್ತ್ರದಲ್ಲಿ ನಿಪುಣರೆಂದು ಪ್ರಖ್ಯಾತನಾದ ಒಬ್ಬ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಇಟ್ಟಿರಬೇಕೆಂದು ತೀರ್ಮಾನಮಾಡಿ ಆರೀತಿ ಮಾಡಿರುವುದು. ಕುತಲರಾದವರು ತಿಳಿಸುವ ಮಾರ್ಗದಲ್ಲಿ ಪರಿಶೋಧನೆಗಳನ್ನು ನಡಿಸುವುದರಿಂದುಂಟಾಗುವ ಪ್ರಯೋಜನಗಳು ಅಂತಹ ಅಧಿಕಾರಿಯನ್ನು ನಿಯಮಿಸಿರುವುದರಿಂದ ಈಗಾಗಲೆ ಪ್ರತ್ಯಕ್ಷವಾಗಿವೆ.

1906ನೆಯ ಸೆಪ್ಟೆಂಬರ್ 28ನೆಯ ತಾರೀಖಿನಲ್ಲಿ ಸಾದರಾಗಿರುವ ರಬ್ಬರ್ ಸಾಗುವಳಿ ನಿಬಂಧನೆಗಳನ್ನು ತಿದ್ದುಪಡಿಮಾಡಿ, 1908ನೆಯ ಜೂನ್ 30ನೆಯ ತಾರೀಖಿಗೆ ಪೂರ್ವದಲ್ಲಿ ತೆಗೆದುಕೊಳ್ಳಲ್ಪಟ್ಟ ಜಮೀನಿನ ಮೇಲಣ ಕಂದಾಯವನ್ನು ಎಕರೆಯೊಂದಕ್ಕೆ ಎರಡು ರೂಪಾಯಿಗೆ ತಗ್ಗಿಸಿದುದಕ್ಕಾಗಿ ಸರ್ಕಾರದವರಿಗೆ ವಂದಿಸುತ್ತೇನೆ. ಕಾಫೀ ಜಮೀನುಗಳಿಗಿರುವಂತೆ ರಬ್ಬರ್ ಸಾಗುವಳಿ ಜಮೀನಿಗೂ ಎಕರೆಯೊಂದಕ್ಕೆ 1½ ರೂಪಾಯಿ ಕಂದಾಯದಂತೆ ಕಾಯಂ ಹಿಡುವಳಿಗೆ ಮತ್ತಷ್ಟು ಜಮೀನನ್ನು ಕೊಡುವುದಾಗಿ ಅದೇ ಹುಕುಮಿನಲ್ಲಿ ಸರ್ಕಾರದವರು ತಮ್ಮ ಇರಾದೆಯನ್ನು ಸೂಚಿಸಿರುವುದರಿಂದ 30 ವರ್ಷಕ್ಕೆ ಕಂದಾಯವು ರಿಯಾಯಿತಿಯಾಗುವ ಹಿಡುವಳಿ ಮೇಲೆ ಜಮೀನನ್ನು ಹೊಂದಿರುವ ಇತರ ಜನರಿಂದ ಕಾಫೀ ಜಮೀನನ್ನು ಮೊದಲೇ ಪಡೆದಿರುವವರು, ಪೂರ್ವದಲ್ಲಿ ಇತರರ ಸ್ವಾಧೀನಾನುಭವದಲ್ಲಿ ಇದ್ದ ಜಮೀನಿಗಾಗಿ 30 ವರ್ಷದ ಅಥವಾ ಮೇಲ್ಪಟ್ಟ ಕಾಲದ ಕಂದಾಯದ ಬಾಕಿಯ ವೈತ್ಯಾಸದ ಮೊಬಲಗನ್ನು ಪಾವತಿ ಮಾಡದೆಯೇ ಮೇಲ್ಕಂಡ ರಿಯಾಯಿತಿಯನ್ನು ಹೊಂದುವುದಕ್ಕೆ ಸಾಧ್ಯವಾಗಬಹುದೆಂಬವಾಗಿ ನಾನು ನಂಬಿದ್ದೇನೆ.

ಈ ಸಂಸ್ಥಾನದ ಉತ್ಪನ್ನಗಳು ರಫ್ತಾಗುವುದಕ್ಕೆ ಮಂಗಳೂರೆ ಸಹಜವಾದ ಮಾರ್ಗವಾಗಿರುವದರಿಂದ, ಮತ್ತಾವ ರೀತಿ ಪಟ್ಟಣಕ್ಕಾದರೂ ರೈಲ್ವೆ ಲೈನನ್ನು ಹಾಕುವ ಪಕ್ಷದಲ್ಲಿ, ಅದರಿಂದ, ಮಂಗಳೂರಿಗೆ ಹಾಲಿ ಇರುವ ಭಾರೀ ವ್ಯಾಪಾರದ ರಫ್ತನ್ನು ತಪ್ಪಿಸುವುದಕ್ಕಾಗುವುದೂ ಇಲ್ಲ ಅಥವಾ ಸಾಮಾನ್ಯವಾಗಿ ನಮ್ಮದೇಶಕ್ಕೆ ಬೇಕಾದುವುಗಳನ್ನು ಬದಗಿಸಿ ಕೊಡುವುದಕ್ಕೂ ಆಗುವುದಿಲ್ಲ, ಇದೇ ನನ್ನ ದೃಢವಾದ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವನ್ನೇ ಲಾರ್ಡ್ ಲ್ಯಾನ್ಸ್‌ಡೌನ್‌ರವರು ವೈಸರಾಯಿ ಆಗಿದ್ದಾಗ ಅವರಿಗೆ ನೊದಲೆ ಅರಿಕೆಮಾಡಿಕೊಳ್ಳಲಾಗಿದೆ.

ಈ ಸಂಸ್ಥಾನದಲ್ಲಿ ರೈಲ್ವೆಗಳನ್ನು ಎಷ್ಟೇ ವಿಸ್ತರಿಸಿದರೂ, ಮಂಗಳೂರಿಗೆ ಸೀದಾ ಲೈನನ್ನು ಹಾಕಿದ ಹೊರತು ರೈಲ್ವೆಗಳಿಂದ ನಮ್ಮವರಿಗೆ ಉಂಟಾಗಬಹುದಾದ ಸಂಪೂರ್ಣ ಪ್ರಯೋಜನವು ಎಂದಿಗೂ ಆಗಲಾರದೆಂಬ ಅನುಭವಪೂರ್ವಕವಾದ ಅಭಿಪ್ರಾಯವನ್ನು ಸಹ ನಾನು ತಿಳಿಸಲಪೇಕ್ಷಿಸುತ್ತೇನೆ.

ತಾವು ಮೈಸೂರು ಸಂಸ್ಥಾನದ ದಿವಾನ್ ಕೆಲಸದಿಂದ ನಿವೃತ್ತರಾಗುವಿರಿ ಎಂಬುದಾಗಿ ವಿಶೇಷ ವದಂತಿ ಇರುತ್ತದೆ. ಈ ಪದವಿಗೆ ಸಂಬಂಧಪಟ್ಟ ಕಾರ್ಯಗಳನ್ನು ತಾವು ವಿಶೇಷ ಸಮರ್ಥತೆಯೊಡನೆ ನಿರವೇರಿಸಿ, ಈ ಸಂಸ್ಥಾನಕ್ಕೂ, ಇಲ್ಲಿಯ ಪ್ರಜೆಗಳಿಗೂ, ನಾನಾ ವೃತ್ತಿಗಳನ್ನು ಅವಲಂಬಿಸಿರುವ ಇತರ ಸಂಘಗಳಿಗೂ ಶಾಶ್ವತವಾದ ಪ್ರಯೋಜನವೆನ್ನು ಉಂಟುಮಾಡಿರುತ್ತೀರಿ.

ಶ್ರೀಮನ್ ಮಹಾರಾಜರವರ ಮುಖ್ಯ ಮಂತ್ರಿಗಳಾಗಿಯೂ, ಮತ್ತು ಈ ರಾಜ್ಯಭಾರಕ್ಕೆ ಸೇರಿದ ಸಕಲ ಮುಖ್ಯಾಧಿಕಾರಸ್ಥಾನಗಳಲ್ಲಿಯೂ ಸಹ ತಾವು ಈ ಮೈಸೂರು ಸಂಸ್ಥಾನದ ಯೋಗಕ್ಷೇಮಕ್ಕಾಗಿ ನಡಿಸಿರುವ ಕಾರ್ಯಾತಿಶಯಗಳನ್ನು ಪ್ಲಾಂಟರುಗಳ ಸಂಘದವರು ಬಹಳವಾಗಿ ಕ್ಲುಪ್ತಿಸುತ್ತಿದ್ದಾರೆಂಬ ಸಂಗತಿಯನ್ನು, ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದ ಪರವಾಗಿ ನಾನು ತಿಳಿಸಲಪೇಕ್ಷಿಸುತ್ತೇನೆ.

ಹುಲ್ಲ್ಯ. ಎಲ್. ಕ್ಯಾಪರ್ಡ್.

III.

To

PRADHANA SIROMANI T. ANANDA ROW, ESQ., B.A., C.I.E.,
Dewan of Mysore.

SIR,

On behalf of the Vokkaligara Sangha, an Association started for the uplifting and amelioration of the main agricultural population of the Mysore State, we beg to offer you our sincere and heartfelt thanks for having given us the privilege of deputing every year a member from our Association to the Dasara Representative Assembly.

While acknowledging with thanks the privilege already granted to us by the benign Government of His Highness the Maharaja, we beg to state that, considering the importance of our Association, it is not too much for us to ask for the deputation, in future, of two members to the Representative Assembly and one member to the Legislative Council.

With two august Patrons like His Highness the Maharaja and His Highness the Yuvaraja of Mysore, with an up-to-date Printing Press capable of doing good work both in English and Kannada, with a weekly Newspaper commanding a wide circulation in the Mysore State and the neighbouring British Territories, with a spacious site kindly granted to us by the Government of His Highness the Maharaja, on which a substantial building will be erected ere long by the generous donors, Messrs. Marappa and Muniswamappa, and with hard-working peasants as members of our Sangha, need we say that our Association has a bright future before it?

We take this opportunity to express our deep loyalty to the British Throne and to state that we are peaceful, happy and contented under the benign rule of His Highness the Maharaja.

We are under a deep debt of gratitude to His Highness for bringing into existence the Economic Conference which augurs well for the future well-being of our State. We cannot but bring to your kind notice that we are not adequately represented in the Economic Conference and that at least two members should be taken from our Sangha to the Conference.

We are gratified to know that, during your Administration, a great impetus has been given to the cause of education, by a liberal grant of two lakhs for the spread of primary education among the masses. It is our long-cherished wish that education should be made free and compulsory throughout the State; and we hope that the time has come for the fulfilment of our wish and that our beloved Maharaja, who is so solicitous about the welfare of his subjects, would graciously vouchsafe to us the boon we have been praying for since the opening of our Second Conference.

In conclusion, we pray for your long life, health, and prosperity and request you to be kind enough to convey our loyal sentiments to our beloved Patron, His Highness the Maharaja.

We beg to subscribe ourselves,

Your most obedient servants,

The Members of the Vokkaligara Sangha.

MYSORE,
23rd October 1912.

Translation of the above.

III.

ಮೈಸೂರು ಸಂಸ್ಥಾನದ ದಿವಾಣರವರಾದ

ಪ್ರಧಾನಶಿರೋಮಣಿ

ಶ್ರೀಮಾನ್ ಟಿ. ಆನಂದರಾವ್, ಬಿ. ಎ., ಸಿ. ಐ. ಇ.

ಯವರ ಸನ್ನಿಧಿಯಲ್ಲಿ.

ಬೇಸಾಯವನ್ನೇ ಮುಖ್ಯವಾದ ಕಸಬನ್ನಾಗಿ ಉಳ್ಳ ಮೈಸೂರು ಸೀಮೆಯ ಒಕ್ಕಲಿಗರ ಮಂಡಲಿಗೆ ಸೇರಿದ ಜನರನ್ನು ಉತ್ತಮಸ್ಥಿತಿಗೆ ತರುವ ಉದ್ದೇಶದೊಡನೆ ಸ್ಥಾಪಿತವಾಗಿರುವ ಒಕ್ಕಲಿಗರ ಸಂಘದ ಪರವಾಗಿ ಸದರಿ ಸಂಘದ ಮೆಂಬರುಗಳಾದ ನಾವುಗಳು ಪ್ರತಿ ವರ್ಷವೂ ನಮ್ಮ ಸಂಘದಿಂದ ದಸರಾ ಪ್ರತಿನಿಧಿ ಸಭೆಗೆ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸುವ ಅಧಿಕಾರವನ್ನು ನಮ್ಮುಗಳಿಗೆ ದಯಪಾಲಿಸಿದುದಕ್ಕಾಗಿ ಕೃತಜ್ಞತಾಪೂರ್ವಕವಾಗಿ ತಮಗೆ ವಂದನೆಗಳನ್ನು ಸಮರ್ಪಿಸುತ್ತೇವೆ, ಮಹಾಸ್ವಾಮಿ.

ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರ ಸರ್ಕಾರದವರು ನಮಗೆ ಈಗಾಗಲೇ ದಯಪಾಲಿಸಿರುವ ಅಧಿಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸುವ ಈ ಸಮಯದಲ್ಲಿ ನಮ್ಮ ಸಂಘದ ಪ್ರಮುಖರತೆಗೆ ತಕ್ಕಂತೆ ಇನ್ನು ಮುಂದೆ ನಮ್ಮ ಸಂಘದಿಂದ ಪ್ರತಿನಿಧಿ ಸಭೆಗೆ ಇಬ್ಬರನ್ನೂ, ನ್ಯಾಯವಿಧಾಯಕ ಸಭೆಗೆ ಒಬ್ಬರನ್ನೂ ಮೆಂಬರಾಗಿ ಚುನಾಯಿಸುವ ಅಧಿಕಾರವನ್ನು ದಯಪಾಲಿಸುವುದು ಅವಶ್ಯಕವೆಂಬುದನ್ನು ಅರಿಕೆ ಮಾಡಿಕೊಳ್ಳಲಪೇಕ್ಷಿಸುತ್ತೇವೆ, ಮಹಾಸ್ವಾಮಿ.

ಘನತೆಯನ್ನೈದಿದ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರೂ, ಶ್ರೀಮದ್ಯುವರಾಜರವರೂ ಸಹ ನಮ್ಮ ಸಂಘಕ್ಕೆ ಮುಖ್ಯ ಪೋಷಕರಾಗಿರುವುದನ್ನೂ, ನಮ್ಮ ಮುದ್ರಾಲಯದಲ್ಲಿ ಈಗಿನ ಕಾಲಕ್ಕೆ ತಕ್ಕಂತೆ

ಇಂಗ್ಲೀಷ್ ಮತ್ತು ಕನ್ನಡ ಮುದ್ರಣ ಕಾರ್ಯಗಳು ತೃಪ್ತಿಕರವಾಗಿ ನಡೆಯುವುದಕ್ಕೆ ತಕ್ಕ ಸೌಕರ್ಯಗಳಿರುವುದನ್ನೂ, ನಮ್ಮ ಸಂಘದಿಂದ ವಾರಕ್ಕೊಂದುಸಾರಿ ಹೊರಡುವ ವಾರ್ತಾ ಪತ್ರಿಕೆಯು ಈ ಸಂಸ್ಥಾನದಲ್ಲಿ ಮಾತ್ರವೇ ಅಲ್ಲದೆ ಸುತ್ತುಮುತ್ತಣ ಬ್ರಿಟಿಷ್ ಡಿಸ್ಟ್ರಿಕ್ಟುಗಳಲ್ಲಿಯೂ ಸಹ ವಿಶೇಷವಾಗಿ ಪ್ರಚಾರಕ್ಕೆ ಬರುತ್ತಿರುವುದನ್ನೂ, ಶ್ರೀಮನ್ಮಹಾರಾಜಾ ಸರ್ಕಾರದವರು ಮುಖತ್ತಾಗಿ ದಯೆಪಾಲಿಸಿರುವ ಜಮೀನಿನಮೇಲೆ ಮೆ॥ ರಾ॥ ಮಾರಪ್ಪನವರೂ, ಮುನಿಸಾಮಪ್ಪನವರೂ ಸಹ ಉದಾರವಾದ ಧರ್ಮ ಬುದ್ಧಿಯೊಡನೆನಮ್ಮ ಸಂಘಕ್ಕೆ ಭಾರಿ ಕಟ್ಟಡವನ್ನು ಶೀಘ್ರದಲ್ಲಿಯೇ ಕಟ್ಟಿಸಿ ಕೊಡುವವರಾಗಿರುವುದನ್ನೂ, ಕಷ್ಟಪಟ್ಟು ಕೆಲಸಮಾಡುವ ಸ್ವಭಾವವುಳ್ಳ ರೈತಾಬಿಜನರು ನಮ್ಮ ಸಂಘದ ಮೆಂಬರುಗಳಾಗಿರುವುದನ್ನೂ ಪರ್ಯಾಲೋಚನೆಗೆ ತೆಗೆದುಕೊಂಡುದೇ ಆದರೆ ನಮ್ಮ ಸಂಘವು ಮುಂದೆ ವಿಶೇಷ ಪುರೋವೃದ್ಧಿಗೆ ಬರುವುದರಲ್ಲಿ ಸಂದೇಹವುಂಟೇ? ಮಹಾಸ್ವಾಮಿ.

ನಾವುಗಳು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯದಲ್ಲಿ ಅಪಾರರಾಜಭಕ್ತಿಯುತರಾಗಿರುವುದಲ್ಲದೆ ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರ ಧರ್ಮ ಪ್ರಭುತ್ವದಲ್ಲಿ ಸುಖ ಸಂತೋಷಗಳನ್ನನುಭವಿಸುತ್ತಾ ತೃಪ್ತರಾಗಿರುತ್ತೇವೆ, ಮಹಾಸ್ವಾಮಿ.

ಈ ಸಂಸ್ಥಾನದ ಪುರೋವೃದ್ಧಿಗೆ ಸಹಕಾರಿಯಾಗಿರುವಂತೆ ನಮ್ಮ ಶ್ರೀಮನ್ಮಹಾರಾಜರವರು ಸಂಪದಭಿವೃದ್ಧಿಸಮೋಜವನ್ನು ವಿಸರ್ಜಿಸಿರುವುದಕ್ಕಾಗಿ ನಾವುಗಳು ವಿಶೇಷ ಕೃತಜ್ಞರಾಗಿರುತ್ತೇವೆ. ಈ ಸಮೋಜಕ್ಕೆ ನಮ್ಮ ಜನರ ಪರವಾಗಿ ಚುನಾಯಿಸಿರುವ ಮೆಂಬರುಗಳ ಸಂಖ್ಯೆಯು ವಿನೇನೂ ಸಾಲದು ; ಆದಕಾರಣ ನಮ್ಮ ಸಂಘದಿಂದ ಕನಿಷ್ಠಪಕ್ಷ ಇಬ್ಬರನ್ನಾದರೂ ಈ ಸಮೋಜಕ್ಕೆ ಚುನಾಯಿಸಿಕೊಳ್ಳಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಸಾಮಾನ್ಯಜನರಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸವು ಪ್ರಾಚುರ್ಯಕ್ಕೆ ಬರಲೆಂಬ ಉದ್ದೇಶದೊಡನೆ ವಿದ್ಯಾಭ್ಯಾಸದ ಬಾಬಿಗೆ ಎರಡು ಲಕ್ಷ ರೂಪಾಯಿಯನ್ನು ತಮ್ಮ ಆಧಿಪತ್ಯದಲ್ಲಿ ಮಂಜೂರ್ ಮಾಡಿರುವುದನ್ನು ಕೇಳಿ ಸಂತೋಷಿಸುತ್ತೇವೆ. ಈ ಸಂಸ್ಥಾನದಲ್ಲೆಲ್ಲಾ ಮುಖತ್ತಾಗಿಯೂ, ನಿರ್ಬಂಧದಿಂದಲೂ ವಿದ್ಯಾಭ್ಯಾಸವು ನಡೆಯುವಂತೆ ವಿಸರ್ಜಿಸಬೇಕಾದುದು ಆವಶ್ಯಕವೆಂದು ನಾವುಗಳು ಬಹುಕಾಲದಿಂದಲೂ ನಿರೀಕ್ಷಿಸುತ್ತಿರುತ್ತೇವೆ. ಪ್ರಜಾಕ್ಷೇಮನಿರತರೆಂದು ಪ್ರಖ್ಯಾತರಾಗಿರುವ ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ನಮ್ಮ ಸಂಘದ ಎರಡನೆಯ ವರ್ಷದ ಮಹಾಸಭೆಯು ಪ್ರಾರಂಭವಾದಂದಿನಿಂದಲೂ ನಾವು ಅರಿಕೆಮಾಡಿಕೊಳ್ಳುತ್ತಿರುವುದನ್ನು ಚಿತ್ತಕ್ಕೆ ತಂದು ನಿರ್ಬಂಧ/ವಿದ್ಯಾಭ್ಯಾಸವನ್ನು ಜಾರಿಗೆ ತರುವುದಕ್ಕೆ ಈಗ ಸಕಾಲವಾಗಿರುತ್ತದೆ, ಮಹಾಸ್ವಾಮಿ.

ನಮ್ಮ ಸಂಘದ ಉದಾರಪೋಷಕರಾದ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರಿಗೆ ತಾವು ರಾಜಭಕ್ತಿಪುರಸ್ಸರವಾದ ನಮ್ಮ ವಿಜ್ಞಾಪನೆಗಳನ್ನು ಸಮರ್ಪಿಸಬೇಕೆಂದು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಭಗವಂತನು ತಮಗೆ ದೀರ್ಘಾಯುರಾರೋಗ್ಯಗಳನ್ನೂ, ಪೂರ್ಣಸುಖಸಂಪತ್ತಿಯನ್ನೂ ದಯೆಪಾಲಿಸಬೇಕೆಂಬುದೇ ಅನವರತವೂ ನಮ್ಮ ಪ್ರಾರ್ಥನೆಯಾಗಿರುವುದು, ಮಹಾಸ್ವಾಮಿ.

ಮೈಸೂರು,
ತಾ॥ ೨೬ ಅಕ್ಟೋಬರ್ ೧೯೦೬.

ತಮ್ಮ ವಿಧೇಯರಾದ,
ಒಕ್ಕಲಿಗರ ಸಂಘದ ಮೆಂಬರುಗಳು.

IV

To

PRADHANA SIROMANI T. ANANDA ROW, Esq., C.I.E.,
Dewan of Mysore.

SIR,

We, the citizens of Chikmagalur town, humbly beg to offer our most grateful thanks to the Government of His Highness the Maharaja for giving Rs. 40,000 to the improvement of Chikmagalur Water Works.

For over ten years, we have been entreating the Government to give us their help for waterworks and drainage. We are indebted to the Government for this first instalment in compliance with our request, and we are confident that before

57

long, our drainage scheme, upon which depends the health and prosperity of nearly 9,000 people, will receive the favourable consideration of the Government.

We have the honour to remain,
Sir,
Your most obedient servants,

C. SRINIVASA RAO,
and other Citizens of Chikmagalur.

Translation of the above.

IV.

ಮೈಸೂರು ಸಂಸ್ಥಾನದ ದಿವಾಣರವರಾದ
ಪ್ರಧಾನಶಿರೋಮಣಿ ಟಿ. ಆನಂದರಾವ್, ಸಿ. ಐ. ಇ. ಯವರ
ಸನ್ನಿಧಾನಂಗಳಲ್ಲಿ.

ಮಹಾಸ್ವಾಮಿ,

ಚಿಕ್ಕಮಗಳೂರಿಗೆ ನೀರಿನ ಸರಬರಾಯಿಯ ಏರ್ಪಾಡಿಗೋಸ್ಕರ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರ ಸರ್ಕಾರದವರು 40,000 ರೂಪಾಯಿಯನ್ನು ಕೊಟ್ಟಿರುವುದಕ್ಕಾಗಿ, ಚಿಕ್ಕಮಗಳೂರು ಕಸಬಾ ನಿವಾಸಿಗಳಾದ ನಾವುಗಳು ನಮ್ಮ ವಿಶೇಷ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ನೀರಿನ ಸರಬರಾಯಿ ಮತ್ತು ಚರಂಡಿಗಳ ಏರ್ಪಾಡಿಗೋಸ್ಕರ ಸರ್ಕಾರದವರ ಸಹಾಯವನ್ನು ಅಪೇಕ್ಷಿಸಿ ಕಳೆದ ಹತ್ತುವರ್ಷಗಳಿಂದಲೂ ಪ್ರಾರ್ಥಿಸಿಕೊಳ್ಳುತ್ತಿದ್ದೇವೆ. ನಮ್ಮೂರಿನ ಕೋರಿಕೆಯನ್ನು ನೆರವೇರಿಸುವ ಉದ್ದೇಶದಿಂದ ಸರ್ಕಾರದವರು ದಯಪಾಲಿಸಿದ ಈ ಪ್ರಥಮ ದ್ರವ್ಯಸಹಾಯಕ್ಕಾಗಿ ಅವರಿಗೆ ಕೃತಜ್ಞರಾಗಿದ್ದೇವೆ; ಮತ್ತು ಸುಮಾರು 9,000 ಪ್ರಜೆಗಳ ಆರೋಗ್ಯಾಭಿವೃದ್ಧಿಗಳಿಗೆ ಆಧಾರವಾಗಿರುವ ಒಳ್ಳೇ ಚರಂಡಿಗಳ ಏರ್ಪಾಡನ್ನು ಶೀಘ್ರದಲ್ಲಿಯೇ ಸರ್ಕಾರದವರು ತಮ್ಮ ಪರ್ಯಾಲೋಚನೆಗೆ ತೆಗೆದುಕೊಂಡು ಸಫಲಗೊಳಿಸುತ್ತಾರೆಂದು ನಾವು ದೃಢವಾಗಿ ನಂಬಿದ್ದೇವೆ.

ತಮ್ಮ ಅತ್ಯಾತ ವಿಧೇಯರಾದ
ಸಿ. ಶ್ರೀನಿವಾಸರಾವ್,
ಮೊದಲಾದ ಚಿಕ್ಕಮಗಳೂರು ಕಸಬಾ ನಿವಾಸಿಗಳು.

DEWAN'S REPLY TO THE ADDRESSES.

Representatives of the Kolar Gold Fields Mining Board, the South Mysore Planters' Association, the Vokkaligara Sangha and the Chikmagalur Municipality.

GENTLEMEN,

My thanks are due to you for the addresses just now read and I am grateful to you for the appreciative remarks contained therein, in regard to the various administrative measures adopted by Government during the past year and for the references to me personally.

2. As regards the question of empowering the Superintendent of Police, Kolar Gold Fields, to serve *notices-to-quit* upon the undesirable characters in the area, an amendment of the Regulation is necessary and this is being attended to in the Legislative Department. The suggested introduction of a "Petty Case Charge Sheet" is being examined, but the matter is not free from legal difficulties. The question will, however, receive the careful consideration of Government and early orders passed on the subject.

3. The covering of the Bethamangalam Water Distribution Tank at Champion Reefs and the construction of European and Anglo-Indian Ward in the Government General Hospital are in temporary abeyance for want of funds and will be put through early.

4. The address of the South Mysore Planters' Association alludes to the importance of connecting Mangalore with the State Railway System. This aspect of the question has not been lost sight of by Government, but preference had to be given to open out interior communications within the State itself.

5. The various other matters mentioned in your addresses will receive the attentive consideration of Government in due course.

6. I shall be happy to convey to His Highness the Yuvaraja your felicitations on his being created a Knight Commander of the Most Eminent Order of the Indian Empire by His Majesty the King-Emperor.

7. It will be my pleasing duty to place before His Highness the Maharaja the sentiments of loyalty and gratitude which you have expressed in your addresses.

T. ANANDA ROW,
Dewan of Mysore.

23rd October 1912.

Translation of the above.

ಕೋಲಾರ ಗೋಲ್ಡ್‌ಫೀಲ್ಡ್ ಮೈನಿಂಗ್‌ಬೋರ್ಡ್, ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘ, ಒಕ್ಕಲಿಗರ ಸಂಘ ಮತ್ತು ಚಿಕ್ಕಮಗಳೂರು ಮ್ಯುನಿಸಿಪಾಲಿಟಿ, ಇವುಗಳಿಂದ ಕಳುಹಿಸಲ್ಪಟ್ಟ ಪ್ರತಿನಿಧಿಗಳಿಗೆ ದಿವಾನರವರು ಕೊಟ್ಟ ಉತ್ತರ.

ಮಹಾಶಯರೆ,

ನೀವುಗಳು ಈಗತಾನೆ ಓದಿ ಒಪ್ಪಿಸಿದ ಅಭಿನಂದನ ಪತ್ರಿಕೆಗಳಿಗಾಗಿಯೂ, ಗತ ಸಂವತ್ಸರದಲ್ಲಿ ಸರ್ಕಾರವರು ಸಂಸ್ಥಾನದ ಆಡಳಿತಗಳ ವಿಷಯದಲ್ಲಿ ಅನುಸರಿಸಿದ ಅನೇಕ ವಿಚಾರಗಳನ್ನು ಕುರಿತು ಸದರಿ ಅಭಿನಂದನ ಪತ್ರಿಕೆಗಳಲ್ಲಿ ಸೂಚಿಸಿರುವ ಸದಭಿಪ್ರಾಯಗಳಿಗಾಗಿಯೂ, ಸ್ವಂತವಾಗಿ ನನ್ನ ವಿಷಯದಲ್ಲಿ ಸೂಚಿಸಿರುವ ಅಂಶಗಳಿಗಾಗಿಯೂ ನಿಮ್ಮುಗಳನ್ನು ವಂದಿಸುತ್ತೇನೆ.

2. ಕೋಲಾರ ಗಣಿಗಳ ಪ್ರದೇಶದಲ್ಲಿರುವ ಬದ್ಮಾಷ್ ಎಂದರೆ ಕೆಟ್ಟ ನಡತೆಯ ಜನಗಳ ಮೇಲೆ "ಬಿಟ್ಟು ಹೋಗತಕ್ಕ ಬಗ್ಗೆ ನೋಟಿಸುಗಳನ್ನು" ಜಾರಿಮಾಡಿಸುವ ಅಧಿಕಾರವನ್ನು ಚಿನ್ನದಗಣಿಯ ಪೊಲೀಸ್ ಸೂಪರ್‌ಟೆಂಡೆಂಟರಿಗೆ ಕೊಡುವ ವಿಚಾರದಲ್ಲಿ ಕಾನೂನು ತಿದ್ದುಪಡಿಯಾಗುವುದು ಅವಶ್ಯಕವಾಗಿದೆ. ಈ ವಿಷಯಕ್ಕೆ ನ್ಯಾಯ ವಿಧಾಯಕ ಇಲಾಖೆಯಲ್ಲಿ ಗಮನ ಕೊಡುತ್ತಿದೆ. "ಪೆಟಿ ಕೇಸ್ ಜಾಬ್ಸ್ ಷೀಟ್" ಎಂದರೆ ಸಣ್ಣ ಮೊಕದ್ದಮೆಗಳಲ್ಲಿ ಅಪರಾಧವನ್ನು ಆರೋಪಿಸುವ ಪಟ್ಟಿಯನ್ನು ಜಾರಿಗೆ ತರಬೇಕೆಂದು ನೀವು ಸೂಚಿಸಿರುವ ವಿಷಯವು ಪರೀಕ್ಷಿಸಲ್ಪಡುತ್ತಿದೆ; ಆದರೆ ಈ ವಿಷಯದಲ್ಲಿ ಕಾನೂನಿಗೆ ಸಂಬಂಧಪಟ್ಟ ತೊಂದರೆಗಳು ಇಲ್ಲದೆ ಇಲ್ಲವೆಂಬ ಇದನ್ನು ಸರ್ಕಾರದವರು ಜಾಗರೂಕತೆಯಿಂದ ಪರ್ಯಾಲೋಚಿಸಿ ಜಾಗ್ರತೆಯಾಗಿ ಹುಕುಂಮಾಡುವರು.

3. ಚಾಂಪಿಯನ್ ರೀಫಿನಲ್ಲಿರುವ ಜೀತಮಂಗಲದ ನೀರಿನ ಸರಬರಾಯಿಯ ತೊಟ್ಟಿಗೆ ಬಂದು ಆವರಣವನ್ನು ಹಾಕಿಸುವುದಕ್ಕೂ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ಯೂರೋಪಿಯರ್ ಮತ್ತು ಆಂಗ್ಲೋ ಇಂಡಿಯನರ ಉಪಯೋಗಾರ್ಥವಾಗಿ ಬಂದು ವಾರ್ಡನ್ನು ಕಟ್ಟಿಸುವುದಕ್ಕೂ ಹಣವು ಬದಗದೆ ಇರುವುದರಿಂದ ಸದ್ಯಕ್ಕೆ ಈ ಕೆಲಸಗಳನ್ನು ನಿಲ್ಲಿಸಲಾಗಿದೆ. ಸಾಧ್ಯವಾದಷ್ಟು ಜಾಗ್ರತೆಯಾಗಿ ಅವುಗಳನ್ನು ಕೈಕೊಳ್ಳಿಲಾಗುವುದು.

4. ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದ ಪರವಾಗಿ ಒಪ್ಪಿಸಲ್ಪಟ್ಟ ಅಭಿನಂದನ ಪತ್ರಿಕೆಯಲ್ಲಿ ಸಂಸ್ಥಾನದ ರೈಲ್ವೆಯನ್ನು ಮಂಗಳೂರು ವರೆಗೂ ವಿಸ್ತರಿಸುವುದು ಮುಖ್ಯವೆಂಬ ಅಂಶವನ್ನು ಸೂಚಿಸಲಾಗಿದೆ. ರೈಲ್ವೆಯ ಎಪ್ಪಾಡಿಗೆ ಸಂಬಂಧಪಟ್ಟ ಈ ವಿಷಯವನ್ನು ಸರ್ಕಾರದವರು ಮರೆತಿಲ್ಲ; ಆದರೆ ಸಂಸ್ಥಾನದ ಒಳ ಭಾಗಗಳಿಗೆಲ್ಲ ರೈಲ್ ಹಾಕಿಸುವ ಪ್ರಯತ್ನದಲ್ಲಿ ಮೊದಲು ದೃಷ್ಟಿ ಇಡಬೇಕಾಯಿತು.

5. ಅಭಿನಂದನ ಪತ್ರಿಕೆಗಳಲ್ಲಿ ಸೂಚಿಸಿರುವ ಅನೇಕ ಇತರ ಸಂಗತಿಗಳನ್ನು ಸರ್ಕಾರದವರು ಕಾಲಕ್ರಮೇಣ ಅವಧಾನಕ್ಕೆ ತೆಗೆದುಕೊಂಡು ಪರ್ಯಾಲೋಚಿಸುವರು.

6. ಅತ್ಯಂತ ಘನತೆಯನ್ನೆ ವ್ಯದಿವ ಸಾರ್ವಭೌಮ ಚಕ್ರವರ್ತಿಗಳಿಂದ ಶ್ರೀಮದ್ಯುವರಾಜರವರಿಗೆ ಕೆ. ಸಿ. ಐ. ಇ. ಎಂಬ ಬಿರುದು ಲಭಿಸಿದುದಕ್ಕಾಗಿ ನಿಮ್ಮುಗಳಿಗೆ ಉಂಟಾಗಿರುವ ಆನಂದಾತಿಶಯವನ್ನು ಯುವರಾಜರವರಿಗೆ ನಾನು ಸಂತೋಷದಿಂದ ತಿಳಿಯ ಪಡಿಸುತ್ತೇನೆ.

7. ನಿಮ್ಮೆಗಳ ಅಭಿನಂದನ ಪತ್ರಿಕೆಗಳಲ್ಲಿ ನೀವು ವ್ಯಕ್ತಪಡಿಸಿರುವ ನಿಮ್ಮ ಭಕ್ತಿಭಾವವನ್ನೂ ಕೃತ ಜ್ಞತೆಯನ್ನೂ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದುರವರ ಸನ್ನಿಧಿಯಲ್ಲಿ ಅರಿಕೆ ಮಾಡುವುದು ನನಗೆ ಸಂತೋ ಷಕರವಾದ ಕರ್ತವ್ಯವಾಗಿರುತ್ತದೆ.

T. ANANDA ROW,
Dewan of Mysore.

23rd October 1912.

V.

ಶ್ರೀಮನ್ಮಹಿಶೂರು ರಾಜಾಧಿರಾಜ ಶ್ರೀ ಕೃಷ್ಣ ರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ.,
ಇವರ ಪ್ರಧಾನಶಿರೋಮಣಿಗಳಾದ

ಶ್ರೀಮಾನ್ ಟಿ. ಆದಂದರಾವ್, ಬಿ.ಎ., ಸಿ.ಐ.ಇ.,
ಇವರ ದಿವ್ಯ ಸನ್ನಿಧಾನದಲ್ಲಿ.

ಇದರಡಿಯಲ್ಲಿ ರುಜುಮಾಡಿರುವ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಸವಿನಯ ವಿಜ್ಞಾಪನಾತತಯಃ.

ಶ್ರೀ ಕೃಷ್ಣವನಿಪಾಲ ಭೂಮಿಭರಣೇ ದಕ್ಷೋತ್ವಯಿ ಸ್ಥಾತರಿ ।
ಸರ್ವಾಶ್ಚಾಪಿ ವಿಭೋ ಪ್ರಜಾಃ ಪ್ರತಿದಿನಂ ರೋಗೈರ್ವಿಯುಕ್ತಾ ಮುದಾ ॥
ಃ ದ್ಯಾವಿತ್ತವಿವೇಕಕೀರ್ತಿಲಸಿತಾ ಜೀವಂತಿ ನಿತ್ಯಂ ಸುಖಂ ।
ಸಸ್ಯಾನಿ ಪ್ರಫಲಂತಿ ವಾರಿ ಜಲದಾ ಮುಂಚಂತಿ ಕಾಲೇ ಸದಾ ॥ ೧ ॥

ಶ್ರೀಮತ್ಕೃಷ್ಣಧರಾಪತೇ್ಯ ವನಿರಿಯಂ ರಾಜನ್ವತೀ ಸು ತ್ವಯಾ ।
ತ್ವತ್ಕೀರ್ತಿರ್ಜಲಧೌ ದ್ಯುತಂ ಪ್ರತಿದಿಕಂ ನಿರ್ಯಾತಿ ವಿದ್ವನ್ಮಣೇ ॥
ಸರ್ವೇದಿಕ್ಪತಯಃ ಪ್ರಶಾಂತಯಶ ಸಸ್ತ್ವದ್ದರ್ಶನಾಕಾಂಕ್ಷಿಣೋ ।
ದಿಕ್ಪ್ರಾಂತಂ ಪ್ರವಿಹಾಯ ತೂರ್ಣಮಿಹ ಭೋಃಹ್ಯಾಯಾಂತಿ ವಿದ್ವಚ್ಛಲಾತ ॥ ೨ ॥

ಶ್ರೀಮಚ್ಚಾಮುನರೇಂದ್ರನಂದನ ಮಹೀಶೂರಾಧಿರಾಜಪ್ರಭೋ ।
ತ್ವತ್ಕೀರ್ತಿಃ ಪರಮೇಶ್ವರೀಯತಿ ಲಸದ್ಗಂಗಾಪ್ರವಾಹೀಯತಿ ॥
ಸ್ವರ್ನಾಗೀಯತಿ ಪಂಕಜೀಯತಿ ಹಸತ್ಕುಂದೀಯತಿ ಫೇನಿಲ ।
ಕ್ಷೀರೋದೀಯತಿ ಮೌಕ್ತಿಕೀಯತಿ ಶರತ್ತಾರಾಧಿನಾಥೀಯತಿ ॥

ಬಾಲೇವಾಪ್ತೋಪಿ ರಾಜ್ಯಂ ತದವನಿನಿಪುಣೋ ಯೋಜಿರೇಣೈ ವಚಾಭೂತ ।
ಸಾದಾಜ್ಯಪ್ರಾಪ್ತತೋಷಪ್ರತಿನಿಧಿವಿತತೇರ್ಯೋ್ಯ ಭವತ್ಪ್ಸೂತ್ರ ಪಾತ್ರಂ ॥
ಯೋ್ಯಸೌ ಪ್ರೀಣಾತಿ ನಿತ್ಯಂ ನಿಜಸಚಿವವರಾನ್ ರಾಜ್ಯತಂತ್ರಪ್ರವೀಣಾ ।
ಸೋ್ಯಯಂ ಶ್ರೀ ಕೃಷ್ಣಭೂಪೋ ಜಯತು ಸಯುವರಾಡಾಭಚೆಂದ್ರೋಷ್ಣರಶ್ಮಿ ॥ ೩ ॥

ಜಯತುಜಯತುಭೂಪೋ ವಿಶ್ವವಿಖ್ಯಾತಭೂಮಾ ।
ಜಯತುಜಯತುಕೀರ್ತಿರ್ವ್ಯಾಪ್ತದಿಕ್ಪ್ರಾಂತಸೀಮಾ ॥
ಜಯತುಜಯತುಕಾಮಂ ಕೃಷ್ಣಭೂಪಾಲನಾಮಾ ।
ಜಯತುಜಯತುಚಾಸ್ಯದ್ಯಾಭ್ಯಗೃತತ್ಪ್ರೈಕಧಾಮಾ ॥ ೪ ॥

ಅತ್ಯಂತ ಘನವೆನ್ನೈದಿದ ನಮ್ಮ ಶ್ರೀಮದ್ರಾಜಾಧಿರಾಜ ಶ್ರೀ ಕೃಷ್ಣ ರಾಜ ಒಡೆಯರ್, ಜಿ.ಸಿ.ಎಸ್.ಐ., ಇವರು ಅತಿ ಬಾಲ್ಯದಲ್ಲಿಯೇ ಪ್ರಾಪ್ತರಾಜ್ಯರಾಗಿದ್ದಾಗ್ಯೂ ಬಹು ಸ್ವಲ್ಪ ಕಾಲದಲ್ಲಿಯೇ ರಾಜ್ಯಭರಣದಲ್ಲಿ ನಿಪುಣತೆಯನ್ನು ಪಡೆದು ಸ್ವಪ್ರಜೆಗಳಿಗೆ ಆಗಾಗ್ಯೆ ಬಂದೊದಗುತ್ತಲಿರುವ ಕುಂದುಕೊರತೆಗಳನ್ನು ಅತ್ಯಾದರದಿಂದ ಖುದ್ದಾಗಿ ತಮ್ಮ ದಿವ್ಯಚಿತ್ತಾವಗಾಹನಕ್ಕೆ ತಂದುಕೊಂಡು ತಮ್ಮ ಚಿತ್ತಾನುವರ್ತಿಗಳಾಗಿಯೂ ಲೌಕಿಕ ಕಾರ್ಯ ಪ್ರವೀಣರಾಗಿಯೂ ಇರುವ ಸಚಿವವರ್ಯರಾದ ತಮ್ಮ ಮೂಲಕ ಅವುಗಳನ್ನೆಲ್ಲಾ ಪರಿಹರಿಸಿ ಸೌಲಭ್ಯವನ್ನುಂಟು ಮಾಡುತ್ತಲಿರುವೆದರಿಂದ ರಾಜ್ಯವು ಸಕಲಸಂಪತ್ಸಮೃದ್ಧಿಯಿಂದೊಪ್ಪಗೂಡಿ ದಿನೇದಿನೇ ಅಭಿವೃದ್ಧಿಸ್ಥಿತ್ಯನ್ನು ಪಡವಾಗುತ್ತಲೂ ಪ್ರಜೆಗಳು ಪ್ರಾಯಶಃ ಸುಖೋನ್ಮುಖರೇ ಆಗುತ್ತಲೂ, ಬರುತ್ತಿರುವೆದನ್ನು ನೋಡಿ ಸಂತುಷ್ಟ ರಾಗುತ್ತಲಿರುವೆ ಈ ನಮ್ಮ ಮಹಾಪ್ರಭುಗಳ ಪ್ರಜಾ ಪ್ರೀತಿವಾತ್ಸಲ್ಯವನ್ನು ಕುರಿತು ನಾವುಗಳು ಹೆಚ್ಚಾಗಿ ಸ್ತುತಿಸಲು ಶಕ್ತರಲ್ಲದೆ ಇದ್ದೇವೆ, ಮಹಾಸ್ವಾಮಿ.

ಮಹಾ ಪ್ರಭುಗಳ ಸತ್ಯಸಂಧತೆಯಿಂದ ರಾಜ್ಯಭಾರವು ಚನ್ನಾಗಿ ನಡೆಯುತ್ತಲಿದೆ ಎಂಬುದು ಈಗ 4–6 ವರ್ಷಗಳಿಂದಲೂ ಕ್ಷಾಮೋದ್ಯಪದ್ರವಗಳು ಬಹುಮಟ್ಟಿಗೆ ತೋರಿತೋರಿ ಕಡಮೆಯಾಗಿ ಸಕಾಲವೃಷ್ಟಿಯಿಂದ

ಭೂಮಿಯು ಫಲಪೈರು ಸಮೃದ್ಧಿಯನ್ನು ಹೊಂದುತ್ತಲಿರುವುದರಿಂದ ವ್ಯಕ್ತವಾಗಿ ನಾವುಗಳು ಇಂತಪ್ಪ ಪ್ರಭುಗಳ ರಾಜ್ಯಾಂತರ್ಗತರಾಗಿ ಇವರ ಪ್ರೀತಿಗೆ ಪಾತ್ರರಾಗಿರುತ್ತೇವೆಂದು ಆನಂದಾಂಬುಧಿಮಗ್ನರಾಗಿದ್ದೇವೆ.

ಈ ಮೆಹಾ ಪ್ರಭುಗಳ ಚಿತ್ತಾನುವರ್ತಿಗಳಾಗಿಯೂ ರಾಜ್ಯಭಾರ ಕಾರ್ಯನಿರ್ವಾಹಕರಾಗಿಯೂ ಇರುವ ತಮಗೆ ಶ್ರೀಮದ್ಬ್ರಿಟಿಷ್ ಸರಕಾರದವರು ಈಚೆಗೆ ದಯಪಾಲಿಸಿದ "ಕಂಪ್ಯಾನಿಯರ್ ಆಫ್ ಇಂಡಿಯರ್ ಎಂಪೈರ್" ಎಂಬೀ ಇದಕ್ಕೆ ಬೀಜಾಕ್ಷರರೂಪಮಾದ ಸಿ.ಐ.ಇ., ಎಂಬೀ ಬಿರುದಿನಿಂದ ತಮ್ಮ ಗೌರವವು ಲೋಕ ವಿಖ್ಯಾತಮೊದುದಲ್ಲದೆ ತಾವೂ ಪ್ರಜೆಗಳಾದ ನಮ್ಮಗಳಿಗೆ ಅಪಾರ್ಥಿತಮಾಗಿ ಸಕಲ ಸೌಲಭ್ಯಗಳನ್ನು ಪರ್ಯಾಲೋಚನೆಯಿಂದ ಕಲ್ಪಿಸಿಕೊಡುತ್ತಲಿರುವುದರಿಂದ ಇಂತಪ್ಪ ಅಮೂತ್ಯವರ್ಯರನ್ನು ಪಡೆದ ನಮ್ಮ ಭಾಗ್ಯೋದಯವು ಅದ್ವಿತೀಯವಾದ್ದೆಂದು ಖಂಡಿತ ತಿಳಿದುಕೊಂಡಿರುತ್ತೇವೆ.

ಮೆಹಾಸ್ವಾಮಿಯವರು ಈ ಸಂಸ್ಥಾನದಲ್ಲಿ ರಾಜ್ಯಭಾರಕಾರ್ಯವನ್ನು ನಿರ್ವಹಿಸಿ ಜನೋಪಕಾರಾರ್ಥವಾಗಿ ಏರ್ಪಡಿಸೋಣಾದ ವಿವಿಧ ರಾಜಕೀಯ ಭಾಗಂಗಳಲ್ಲಿ ಮುಖ್ಯವಾದ ವ್ಯವಸಾಯ, ಕೈಗಾರಿಕೆ, ಅನ್ಯೋನ್ಯ ಸಹಾಯ ಸಂಘಗಳ ಅಭಿವೃದ್ಧಿ, [ಇವುಗಳ ಅನುಕೂಲತೆಗಳು, ಅಶೇಷ ಪ್ರಜೆಗಳ ಕೃತಜ್ಞತೆಗೆ ಪಾತ್ರಂಗಳಾಗಿರುವ ಅಂಶವು ಸರ್ವತ್ರ ಹೃದಯಂಗಮವಾಗಿರುತ್ತದೆ. ಮತ್ತು ಪ್ರಜೆಗಳು ತಮ್ಮ ತಮ್ಮ ಕಷ್ಟಸುಖಂಗಳನ್ನು ಆಕ್ಷೇತ್ತರಗಳನ್ನು ಸನ್ನಿಧಾನದಲ್ಲಿ ತಿಳಿಯಪಡಿಸುವದಕ್ಕೆ ಅತಿ ಸುಲಭಮಾರ್ಗವಾದ ಈ ಸಭೆಯನ್ನು ಮೆಹಾಸ್ವಾಮಿಯವರು ತತ್ಪ್ರಮುಖ್ಯತೆಯಿಂದ ಪ್ರಜಾನುಕೂಲವಾದ ನಾನಾ ವಿಧವಾದ ಏರ್ಪಾಡುಗಳೊಡನೆ ಪ್ರೋತ್ಸಾಹಿಸುತ್ತಲಿರುವೆರಿಂದ ಪ್ರಜೆಗಳಿಗೆ ಸುಖಾಕರಮೊದೀ ಸಭೆಯು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನು ಹೊಂದುತ್ತಲಿರುವೆದರಲ್ಲಿ ಪ್ರಜೆಗಳ ಸುಖವು ಕ್ಷೇಮವು ಹೆಚ್ಚುತ್ತಲಿರುವೆದರಿಂದ ಈ ಸಂಸ್ಥಾನವು ಇಂಡಿಯಾದಲ್ಲೆಲ್ಲಾ "ಮಾಡಲ್ ಸ್ಟೇಟ್" ಎಂಬ ಪ್ರಖ್ಯಾತಿಯನ್ನು ಹೊಂದಿದ್ದಾಗಿರುತ್ತೆ.

ಈ ವರುಷ ನಮ್ಮ ಡಿಸ್ಟ್ರಿಕ್ಟ್ ಪ್ರದೇಶಂಗಳಲ್ಲೆಲ್ಲಾ ಸಕಾಲ ವೃಷ್ಟಿಯಿಂದ ಭೂಮಿಯು ಸಸ್ಯಾಭಿವೃದ್ಧಿಯೊಡನೆ ಫಲಭರಿತವಾಗಿ ಆನಂದಮಯವಾಗಿರುವದನ್ನು ಇದೇ ಸುಸಮಯವಾಗಿ ಸನ್ನಿಧಿಯಲ್ಲಿ ಸೂಚಿಸಲು ತುಂಬಾ ಸಂತುಷ್ಟರಾಗಿರುತ್ತೇವೆ, ಮೆಹಾಸ್ವಾಮಿ.

ಸಾನುಜರಾದ ಶ್ರೀಕೃಷ್ಣ ರಾಜಾಸಾಹೇಬ್ ಬಹದ್ದೂರವರ ಸನ್ನಿಧಿಯಲ್ಲಿ ನಮ್ಮಗಳ ವಿನಯಪೂರ್ವಕವಾದ ವಿಜ್ಞಾಪನಾತತಿಗಳನ್ನು ಪ್ರತಿನಿಧಿಗಳಾದ ನಮ್ಮ ಪರವಾಗಿ ಶ್ರುತಪಡಿಸಲು ತಮ್ಮ ದಿವ್ಯಸನ್ನಿಧಿಯಲ್ಲಿ, ವಿಜ್ಞಾಪಿಸಿಕೊಳ್ಳುತ್ತೇವೆ.

ಶ್ರೀಮತ್ಕೃಷ್ಣ ರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಇವರಿಗೂ, ಇವರ ಅನುಜರಾದ ಶ್ರೀಮತ್ಕಂಠೀರವ ನೃಸಿಂಹರಾಜ ಒಡೆಯರ್ ಕೆ.ಸಿ.ಐ.ಇ., ಇವರಿಗೂ ಇವರ ಕುಟುಂಬವರ್ಗಕ್ಕೂ ಮತ್ತು ಮುಖ್ಯಾಮಾತ್ಯಾಗ್ರಣಿಗಳಾದ ತಮಗೂ ಸಪ ಸರ್ವಕಾರಣಕನಾದ ಶ್ರೀ ಭಗವಂತನು ದೀರ್ಘಾಯುರಾರೋಗ್ಯಪ್ರದನಾಗಲೆಂದು ನಿರಂತರದಲ್ಲೂ ಪ್ರಾರ್ಥಿಸುತ್ತೇವೆ, ಮೆಹಾಸ್ವಾಮಿ.

ಶ್ರೀಮತ್ಕೃಷ್ಣಧರಾಭೃತೇ ಕರುಣಯಾ ಕಲ್ಯಾಣರತ್ನಾಕರಃ ।
ಪ್ರಾಲೇಯಾಚಲಕನ್ಯಕಾತನುಭವಾಶ್ಲಿಷ್ಟಾರ್ಧಭಾಗೋಜ್ಜ್ವಲಃ ॥
ನಕ್ಷತ್ರೇಶವಿಭೂಷಿತೋತ್ತಮತನುಸ್ತತ್ತೋಷದೇಷ್ಟಾಮುದಾ ।
ಕಾಂತೇಭ್ಯೋವಮುನಿಸಂತತಿಭ್ಯ ಇಜ ಸ ಶ್ರೇಯಾಂಸಿ ದೇಯಾಚ್ಚಿರಂ ॥
ಜಯತು ಯದುಕುಲೇಶಃ ಕೃಷ್ಣರಾಜಸ್ಸದಾತಃ ।
ಜಯತು ಸಯುವರಾಜೋ ರಾಜಕಾರ್ಯೇ ಧುರೀಣಃ ॥
ಜಯತು ಚಿರಮಸೌಸನ್ಮಾರ್ಗಕೋ ರಾಜವಂಶಃ ।
ಜಯತು ಸಚಿವವರ್ಯಶ್ರೀಮದಾನಂದರಾಯಃ ॥

ಪ್ರಜಾಸಂಘಾನುಮೋದೇನ ಪ್ರಜಾಪ್ರತಿನಿಧಿಸ್ತ್ವಯಾಂ ।
ಕೃಷ್ಣರಾಯೋಽಪಮಲಿಖಂತ್ವಭಿನಂದನಪತ್ರಿಕಾಂ ॥

1. ಹೊಸಕೊಪ್ಪ ಕೃಷ್ಣರಾವ್,
ಕಡೂರ್ ಡಿ॥ ಬೊ॥ ಪ್ರಜಾಪ್ರತಿನಿಧಿ ಮೆಂಬರ್.

2. ಕಂಚೀತೋಟದ ಕೃಷ್ಣಪ್ಪ,
ಕೊಪ್ಪದ ತಾಲ್ಲೂಕು ಕಡೂರು ಡಿಸ್ಟ್ರಿಕ್ಟ್.

3. ಹಾಲಗಾರ್ ಹುಚ್ಚಾವ್,
ಕೊಪ್ಪ ತಾಲ್ಲೂಕು.

4. ಯಜಮಾನ್ ರಂಗಭಟ್ಟ,
ಕಡೂರು ಡಿಸ್ಟ್ರಿಕ್ಟ್ ಬೋರ್ಡ್.

5. ಮಿಯಾ ಮಹಮದ್ ಸಾಹೇಬರು,
ತರೀಕೆರೆ ತಾಲ್ಲೂಕು.

6. ಚಿಕ್ಕಮಸೂತಿ ಬಾಬಾಸಾಹೇಬರು,
ತರೀಕೆರೆ ತಾಲ್ಲೂಕು.

7. ಬರೀದಿ ಲಿಂಗಪ್ಪಕೆಟ್ಟಿ,
ಕಡೂರು ತಾಲ್ಲೂಕು.
8. ಶ್ರೀನಿವಾಸ ಸೀತಾರಾಮ ಕುಲಕರ್ಣಿ,
ಚಿತ್ರದುರ್ಗ ಡಿ|| ಬೋರ್ಡ್ ಮೆಂಬರ್.
9. ಪಟೇಲ್ ಲಿಂಗಪ್ಪ,
ಹರಿಹರ ಸಬ್ ತಾಲ್ಲೂಕು.
10. ಚನ್ನಬಸವಯ್ಯ,
ಹರಿಹರದ ಮ್ಯುನಿಸಿಪಾಲಿಟಿ.
11. ಸಾಹುಕಾರ ಚನ್ನಪ್ಪ,
ಚನ್ನಗಿರಿ ತಾಲ್ಲೂಕು.
12. ಸಾಹುಕಾರ ಚಿಕ್ಕವೀರಪ್ಪ,
ಚಿತ್ರದುರ್ಗದ ತಾಲ್ಲೂಕು.
13. ಮೂಗಾನಹಳ್ಳಿ ಸಂಗಪ್ಪ,
ದಾವಣಗೆರೆ ತಾಲ್ಲೂಕು.
14. ರಂಗಪ್ಪ,
ಹೊಳಲ್ಕೆರೆ ತಾಲ್ಲೂಕು.

VI.

ಮೈಸೂರು ಸಂಸ್ಥಾನದ ಶ್ರೀಮೆ ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರೂ
ಮತ್ತು ಮೈಸೂರ್ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರೂ ಆದ ಪ್ರಧಾನಶಿರೋಮಣಿ
ಮಿಸ್ಟರ್ ತಂಜಾವೂರ್ ಮಾಧವರಾವ್ ಆನಂದರಾವ್, ಬಿ. ಏ., ಸಿ. ಐ. ಇ.
ಯವರ ಸನ್ನಿಧಾನದಲ್ಲಿ.

ಮಹಾಸ್ವಾಮಿ,

ನಮ್ಮ ಶ್ರೀಮೆ ಮಹಾರಾಜಾ ಸರ್ಕಾರದವರು ಈ ಪ್ರತಿನಿಧಿ ಸಭೆಯ ಕಾರ್ಯಗಳು ಲಲಿತವಾಗಿ ನೆರವೇರಲು ಪ್ರೋತ್ಸಾಹವನ್ನು ದಯಪಾಲಿಸುತಲಿರುವುದಕ್ಕೂ, ಈ ಮಹಾಸಭೆಗೆ ತಮ್ಮ ಸರ ಪ್ರತಿನಿಧಿಗಳನ್ನು ಚುನಾಯಿಸಿ ಇಲ್ಲಿಗೆ ಕಳುಹಿಸುವ ಸ್ವಾತಂತ್ರ್ಯವನ್ನು ದೇಶೀಯ ಪ್ರಜೆಗಳಿಗೂ, ದೇಶೀಯ ಪ್ರಜೋಪಕಾರ ಸಭೆಗಳಿಗೂ, ಕೊಡುತಲಿರುವುದಕ್ಕೂ ಸಹ ನಾವುಗಳು ಕೃತಜ್ಞರಾಗಿದ್ದೇವೆ.

ಕಳೆದ ವರುಷ ದೆಹಲೀ ನಗರದಲ್ಲಿ ನಡೆದ ಶ್ರೀಮದಿಂಡಿಯಾ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವವು ಈ ಭಾರತಭೂಮಿಯ ಇತಿಹಾಸ ಪ್ರಪಂಚಕ್ಕೆ ಅಲಂಕಾರವಾಗಿದೆ. ಇಂಥ ಮಹೋತ್ಸವಕ್ಕೆ ಶ್ರೀಮಚ್ಚಕ್ರವರ್ತಿಗಳ ಪರಮ ಮಿತ್ರರೂ ಬ್ರಿಟಿಷ್ ಚಕ್ರಾಧಿಪತ್ಯದ ಶುಭಾಕಾಂಕ್ಷಿಗಳೂ ಆದ ನಮ್ಮ ಶ್ರೀಮನ್ಮಹಾರಾಜರವರೂ ಶ್ರೀಮೆಮ್ಯುವೆರಾಜರವರೂ ತಮ್ಮ ಉನ್ನತ ಪದವಿಗೆ ತಕ್ಕ ಪರಿವಾರದಿಂದ ಯುಕ್ತರಾಗಿ ಚಿತ್ತೈಸಿ ಆ ಅಪೂರ್ವ ಮತ್ತು ಅನಿತರ ಸಾಧಾರಣವಾದ ಉತ್ಸವದಲ್ಲಿ ಸತ್ಕೃತರಾಗಿರುವುದೂ, ಆ ಶುಭ ಸಮಯದಲ್ಲೇ ನಮ್ಮ ಶ್ರೀಮೆದ್ಯುವೆರಾಜರವರು ಕೆ. ಸಿ. ಐ. ಇ. ಎಂಬ ಉತ್ಕೃಷ್ಟವಾದ ಬಿರುದಿನಿಂದ ಸಂಮಾನಿತರಾಗಿರುವೆವೂ ಸಹ ಸಂಸ್ಥಾನದ ಪ್ರಜೆಗಳಿಗೆ ಹೆಚ್ಚು ಸಂತೋಷವನ್ನುಂಟುಮಾಡುವದಾಗಿದೆ.

ಈ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಪ್ರತಿನಿಧಿಗಳಾದ ಉಭಯ ಮೆಂಬರುಗಳನ್ನೂ ಆ ಪ್ರಸಿದ್ಧ ಕಿರೀಟಧಾರಣ ಮಹೋತ್ಸವಕ್ಕೆ ನಮ್ಮ ಸರ್ಕಾರದವರು ತಮ್ಮ ಸಾಮೋಚಿಕ್ಕರನ್ನಾಗಿ ಭಾವಿಸಿ ಬರಮಾಡಿಕೊಂಡದ್ದರಿಂದ ಈ ಸಭೆಗೆ ಹೆಚ್ಚಾದ ಗೌರವವು ಉಂಟಾಗಿರುತ್ತೆ. ಇದಕ್ಕಾಗಿ ನಾವುಗಳು ನಮ್ಮ ಸರ್ಕಾರದವರಿಗೆ ಕೃತಜ್ಞರಾಗಿದ್ದೇವೆ.

ನಮ್ಮ ಶ್ರೀಮೆದ್ಯುವೆರಾಜರವರು ತಮಗೆ ವಸ್ತುತಃ ಕುಲಕ್ರಮಾಗತವಾಗಿ ಬಂದ ಪ್ರಜಾಪಾಲನೆಯನ್ನು ಕಾರ್ಯತಃ ವ್ಯಕ್ತಪಡಿಸಿರುವುದಕ್ಕೆ ನಿದರ್ಶನವಾಗಿ ಈ ಸಂಸ್ಥಾನದ ಮಿಲಿಟೆರಿ ಸೆಕ್ರಿಟೆರಿ ಪದವಿಯನ್ನು ವಹಿಸುವಷ್ಟು ಕೃಪಾಶಾಲಿಗಳಾದ್ದರಿಂದ ಆ ಪದವಿಗೆ ಬಂದು ಪ್ರಾಕಸ್ಮ್ಯವೂ ಪ್ರಜೆಗಳಿಗೆ ಹೆಚ್ಚಾದ ತೃಪ್ತಿಯೂ ಉಂಟಾಗಿರುವುದು. ಇದಕ್ಕಾಗಿ ಅವರನ್ನು ನಾವು ವಂದಿಸುವೆವು.

ಈ ದೇಶದ ಇಂಗ್ಲಿಷ್ ವಿದ್ಯಾಶಾಲೆಯಲ್ಲಿ ಸ್ಕೂಲ್ ಫೈನಲ್ ಸರ್ಟಿಫಿಕೇಟ್ ಪರೀಕ್ಷೆಯನ್ನು ಏರ್ಪಡಿಸಿದ್ದರಿಂದ ನಮ್ಮ ಬಾಲಕರ ಭವಿಷ್ಯದ್ಭಾಗ್ಯವು ಬಹುಮಟ್ಟಿಗೆ ಉಜ್ಜೀವಿತವಾಯಿತು. ಈ ಮಹೋಪಕಾರವನ್ನು ಮಾಡಿದ ನಮ್ಮ ಶ್ರೀಮೆ ಮಹಾರಾಜರವರಿಗೂ, ಅವರ ದರ್ಬಾರಿನವರಿಗೂ ನಾವು ವಂದನೆಗಳನ್ನು ಸಮರ್ಪಿಸುತ್ತೇವೆ.

ಎಕನಾಮಿಕ್ ಕಾಂಫರೆನ್ಸಿನ ಇಂಡಸ್ಟ್ರಿಯಲ್ ಸರ್ಕಲ್ ಮೆಕ್ಯಾನಿಕಲ್ ಇಂಜನಿಯರವರು ನಮ್ಮ ಪ್ರಾಂತ್ಯ ದಯಮಾಡಿ ಕಬ್ಬಿನ ಯಂತ್ರ, ಎಣ್ಣೆ ತೆಗೆಯುವ ಯಂತ್ರ ಮತ್ತು ನೀರನ್ನು ಎತ್ತುವೆ ಯಂತ್ರ ಇವುಗಳ ಉಪಯೋಗವನ್ನು ಆಯಾಯ ನಾಡುಗಳಿಗೆ ಬಂದು ರೈತರುಗಳೊಡನೆ ಕಲಿತು ಕಾಂಫರೆನ್ಸಿನ ಉದ್ದೇಶವನ್ನೂ ಯಂತ್ರಗಳ ಉಪಯೋಗದ ಹೆಚ್ಚು ಲಾಭಗಳನ್ನೂ ಸರ್ಕಾರದವರಿಗೆ ಪ್ರಜೆಗಳಲ್ಲಿರುವ ವಾತ್ಸಲ್ಯವನ್ನೂ ವ್ಯಕ್ತಪಡಿಸಿ ಪ್ರೋತ್ಸಾಹ ಪಡಿಸುತಲಿರುವುದಕ್ಕೆ ನಾವು ಕೃತಜ್ಞರಾಗಿದ್ದೇವೆ. ಈ ಸಂಸ್ಥಾನದಲ್ಲಿ ಕಂಪಲ್ಸರಿ ಎಜ್ಯುಕೇಷ್ ಕ್ರಮವನ್ನು ದಯವಿಟ್ಟು ಜಾಗ್ರತೆಯಾಗಿ ಆಚರಣೆಯಲ್ಲಿ ತರಬೇಕು. ಇದರಿಂದ ನಮ್ಮ ಜನಾಂಗಕ್ಕೆ ಉಂಟಾಗಬಹುದಾದ ಪ್ರಯೋಜನವು ಅಪಾರವಾಗಿರುತ್ತೆ.

ನಮ್ಮ ಅಷ್ಟಗ್ರಾಮ ಪ್ರಾಂತ್ಯವು ಕಬ್ಬಿನ ವ್ಯವಸಾಯಕ್ಕೆ ಹೆಸರುಗೊಂಡಿದೆ. ಇದರ ಮಧ್ಯರಾಷ್ಟ್ರವಾದ ಫ್ರೆಂಚ್‌ರಾಕ್ಸಿನಲ್ಲಿ ಒಂದು ಕಬ್ಬಿನ ಯಂತ್ರವನ್ನು ಪರೀಕ್ಷಾರ್ಥವಾಗಿ ಸರ್ಕಾರದವರು ಸ್ಥಾಪಿಸಿಕೊಟ್ಟಲ್ಲಿ ರೈತರು ಅದರ ವಿಚಾರವನ್ನು ಕ್ರಮವಾಗಿ ಮಂದಟ್ಟು ಮಾಡಿಕೊಂಡು ಅನಂತರ ತಾವು ತಾವೆ ಈ ವಿಚಾರದಲ್ಲಿ ವರ್ತಿಸಲು ಅನುಕೂಲಿಸುವುದು. ಸರ್ಕಾರದವರು ಈ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕು.

ಚಿರಕಾಲದಿಂದ ನಿಂತುಹೋಗಿದ್ದ ಲೋಹಮಾರ್ಗಪ್ರತಿಷ್ಠೆಗಳ ವಿಚಾರದಲ್ಲಿ ಸರ್ಕಾರದವರು ಗಮನ ಕೊಟ್ಟಿರುವುದಕ್ಕೆ ನಾವು ಬಹಳ ಸಂತೋಷ ಪಡುತ್ತೇವೆ. ಮೇಲುಕೋಟೆಯು ಈ ದೇಶದಲ್ಲಿ ಒಂದು ದೊಡ್ಡ ಯಾತ್ರಾಸ್ಥಳ. ಶ್ರೀರಂಗಪಟ್ಟಣದಿಂದ ಕೃಷ್ಣರಾಜಪೇಟೆಯ ಮಾರ್ಗವಾಗಿ ಕೊನೇಹಳ್ಳಿಗೆ ಏರ್ಪಾಡಾಗಿರುವ ರೈಲ್ ಮಾರ್ಗವನ್ನು ಕೈಲಾದಮಟ್ಟಿಗೂ ಮೇಲುಕೋಟೆಗೆ ಸವಿಾಪವಾಗಿ ಏರ್ಪಡಿಸಿಕೊಡಲು ಕೇಳಿ ಕೊಳ್ಳುತ್ತೇವೆ.

ಮೇಲುಕೋಟೆ ದೊಡ್ಡ ಊರು. ಇಲ್ಲಿ ಆಸ್ಪತ್ರೆ ಇಲ್ಲದೆ ಇರುವುದು ಕೇವಲ ತೊಂದರೆಯಾಗಿದೆ. ಅನೇಕ ದಿನಗಳಿಂದ ಈ ನಡೆವಳಿಕೆ ಸರ್ಕಾರದಲ್ಲಿ ನಡೆಯುತ್ತಾ ಇದೆ. ಜಾಗ್ರತೆಯಾಗಿ ಮುಂಜಾರ್ ಮಾಡಿಸಿ ಕೊಡ ಬೇಕಾಗಿ ಪ್ರಾರ್ಥನೆ.

ಈ ವಿಜ್ಞಾಪನೆಯ ಉಪಸಂಹಾರದಲ್ಲಿ ಕೆಲವು ಸಂತೋಷ ವಿಚಾರವನ್ನು ತಮ್ಮಲ್ಲಿ ಅರಿಕೆ ಮಾಡಲು ನಮಗೆ ಹೆಚ್ಚು ಸಂಭ್ರಮವುಂಟಾಗಿರುವುದು. ಕಳೆದ ಸೆನ್ಸಸ್ ಇಲಾಖಾ ರಿಪೋರ್ಟಿನಿಂದ ಸಂಸ್ಥಾನದ ಪ್ರಜಾ ಸಂಖ್ಯೆಯು ಎಂದಿಗಿಂತಲೂ ಅತಿಶಯವಾಗಿರುವದು. ಈ ವರುಷದ ಕಾಲಸ್ಥಿತಿಯೂ ಬಹು ಸುಭಿಕ್ಷವಾಗಿ ಮೆರೆಯುತ್ತಲಿದೆ.

"ಸಮೆಯವಿಹಿತವೃಷ್ಟಸ್ಸಸ್ಯಪೂರ್ಣಾ ಧರಿತ್ರೀ"

ಎಂಬ ಆರ್ಷ ವಚನವು ಪ್ರಕೃತದಲ್ಲಿ ಅನ್ವರ್ಥವಾಗಿರುವದು.

ಮತ್ತು ನಮ್ಮದೇಶದ ಸಿವಿಲ್‌ಸರ್ವಿಸ್ ಪರೀಕ್ಷೆಯನ್ನು ಸರ್ಕಾರದವರು ಮಹಾಜನಗಳ ಪ್ರಾರ್ಥನೆಯಂತೆ ಕೆಲವು ಬದಲಾವಣೆಯಿಂದ ಏರ್ಪಡಿಸಿದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿದ್ದೇವೆ. ಮತ್ತು ನಮ್ಮ ಶ್ರೀಮನ್ ಮಹಾರಾಜರವರು ಈ ನವರಾತ್ರೆಯ ಮಹೋತ್ಸವದ ತಮ್ಮ ಸಿಂಹಾಸನದ ದರ್ಬಾರಿನಲ್ಲಿ ತಮಗೆ "ಪ್ರಧಾನಶಿರೋಮಣಿ" ಎಂಬ ಶ್ಲಾಘನೀಯವಾವ ಬಿರುದನ್ನು ದಯಪಾಲಿಸಿರುವುದು ತಮ್ಮ ಘನತೆಯನ್ನು ಬಹಳವಾಗಿ ಕೊಂಡಾಡುತಲಿದೆ.

ಪ್ರಜೆಗಳಾದ ನಾವು ನಮ್ಮ ಸರ್ಕಾರದಲ್ಲೂ/ಸಾರ್ವಭೌಮಸರ್ಕಾರದಲ್ಲೂ ನಿರತಿಶಯವಾದ ರಾಜಭಕ್ತಿ ವಿಶ್ವಾಸಗಳುಳ್ಳವರಾಗಿದ್ದೇವೆ.

ಸರ್ವಚೈತನ್ಯಸ್ವರೂಪನಾದ ಭಗವಂತನು ಸಕುಟುಂಬಪರಿವಾರರಾದ ಶ್ರೀಮನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ತಮಗೂ, ತಮ್ಮ ದರ್ಬಾರಿನವರಿಗೂ, ಹೆಚ್ಚಾದ ಆಯುರಾರೋಗ್ಯ ಸಂತೋಷಗಳನ್ನೂ ದಯಪಾಲಿಸಿ ಕಾಪಾಡುತಬರಬೇಕೆಂಬುದೇ ನಮ್ಮ ಪ್ರಾರ್ಥನೆಯಾಗಿದೆ.

ತಮ್ಮ ಅತ್ಯಂತವಿಧೇಯ,

ಜೆಚ್. ಕೃಷ್ಣಶಾಸ್ತ್ರಿ,
ರೆಪ್ರೆಜಂಟೆಟಿವ್ ಮೆಂಬರ್,
ಸದಾನಂದವರ್ಧಿನೀ ಸಭಾ,
ಮೇಲುಕೋಟೆ.

ಮೈಸೂರು.
23—10—1912.

VII.

ಆನಂದಾಯುತ್ವಾಂಪಾತು ಲಕ್ಷ್ಮೀಭೂಸತಿರಚ್ಯುತಃ |
ದತ್ವಾದೀರ್ಘಾಯುರಾರೋಗ್ಯಂ ತೇ ಪ್ರಧಾನಶಿರೋಮಣೇಃ ||

ಮೈಸೂರು ಸಂಸ್ಥಾನದ ದಿವಾನ್ ಟಿ. ಆನಂದರಾವ್, ಸಿ.ಐ.ಇ. ಪ್ರಧಾನ ಶಿರೋಮಣಿಗಳವರ ಸನ್ನಿಧಾನದಲ್ಲಿ.

ಮೈಸೂರು ಸಂಸ್ಥಾನದ ಪ್ರಜೆಗಳ ಪ್ರತಿನಿಧಿಗಳು ಮಾಡುವ ವಿಜ್ಞಾಪನೆಗಳು.

ಅನೇಕ ಸಂಸ್ಥಾನಗಳಲ್ಲಿ ದಿವಾನಗಿರಿಯನ್ನು ಮಾಡಿ ಈ ಭರತಖಂಡದಲ್ಲಿ ಪ್ರಖ್ಯಾತಿಯನ್ನು ಪಡೆದ, ಸರ್. ಟಿ. ಮಾಧವರಾಯರವರ ಪುತ್ರರಾದ ತಮ್ಮನ್ನು ಚೀಫ್ ಕಮಿಷನರ್‌ರವರ ಕಾಲದಲ್ಲಿ ಅಟೂಚಿ ಕೆಲಸಕ್ಕೆ ನೇಮಿಸಿದರು. ತದಾದಿಯಾಗಿ (30) ಮೂವ್ವತ್ತು ವರುಷಗಳವರಿಗೂ ಕಾಲೋಚಿತವಾಗಿ ಪ್ರಮೋಷನ್ನಾಗಿ ಬಂದ ಪ್ರತಿ ಕಾರ್ಯಗಳಲ್ಲೂ ನಿಸ್ಪೃಹತೆಯಿಂದಲೂ, ಮನಃಸ್ಸಾಕ್ಷಿಯಾಗಿಯೂ, ಮಾಡಿದ ತಮ್ಮ ಅಧಿಕಾರದ

ವಿಚಕ್ಷಣೆಯನ್ನು ನೋಡಿ ನಮ್ಮ ಮಹಾಸ್ವಾಮಿಯವರು ತಮ್ಮನ್ನು Iನೇ ಕೌನ್ಸಿಲರಾಗಿ ನೇಮಿಸಿ, ಅದರಲ್ಲೂ ತಮ್ಮ ಅನ್ಯಾದೃಶವಾದ ಯೋಗ್ಯತೆಯನ್ನು ಪರಾಂಬರಿಸಿ, ಈ ಸಂಸ್ಥಾನದ ದಿವಾಣಗಿರಿಗೆ ನೇಮಿಸಿಕೊಂಡರು.

ತಾವು ದಿವಾಣಗಿರಿಗೆ ದಯಮಾಡಿದಾರಭ್ಯ ಪ್ರತಿ ವರುಷವೂ ನಡಿಸಿದ (4) ನಾಲ್ಕು ಪ್ರತಿನಿಧಿಗಳ ಸಭೆಗಳಲ್ಲೂ ಶಾಂತಚಿತ್ತರಾಗಿ ಸಾವಧಾನದಿಂದ ಪ್ರತಿನಿಧಿಗಳ ಸೂಚನೆಗಳನ್ನು ಚರ್ಚೆಮಾಡಿ, ಸಾಧ್ಯವಾದಮಟ್ಟಿಗೂ ಪ್ರಜೋಪಕಾರಕವಾದ ಅನೇಕ ಪ್ರಾರ್ಥನೆಗಳನ್ನು ಸಫಲಗೊಳಿಸಿದಿರಿಯಂತ ಈ ಸಭೆಯಲ್ಲಿ ಸಂತೋಷದಿಂದ ಅರಿಕೆಮಾಡುತ್ತೇವೆ.

ತಮ್ಮ ದಿವಾಣಗಿರಿ ಕಾಲದಲ್ಲಿ ದೇಶಾಭ್ಯುದಯಕ್ಕೆ ಕಾರಣವಾದ ವ್ಯವಸಾಯಾಭಿವೃದ್ಧಿ, ಶಿಲ್ಪಾಭಿವೃದ್ಧಿ ಮತ್ತು ವಿದ್ಯಾಭಿವೃದ್ಧಿ ಇವುಗಳಿಗೆ ಉತ್ತೇಜಕವಾದ ಕಾರ್ಖರ್ಕಸನ್ನು ಮಹಾಸ್ವಾಮಿಯವರು, ಪ್ರಾರಂಭಿಸಿದ್ದಕ್ಕೆ ತಾವು ವಿಶೇಷವಾಗಿ ಗಮನಕೊಟ್ಟು, ಸಾರ್ವಜನಕವಾದ ವಿದ್ಯಾಭಿವೃದ್ಧಿಗೆ ಈ ಸಂವತ್ಸರದಲ್ಲಿ ತಾವು ಹೆಚ್ಚು ದ್ರವ್ಯವನ್ನು ಖರ್ಚಿಗೆ ಕೊಟ್ಟು ಇರುವದುಕೂಡಾ ಪ್ರಜೆಗಳಾದ ನಮ್ಮೆಗಳೆಲ್ಲರಿಗೂ ಆನಂದಕರವಾಗಿ ಇದೆ.

ಅನೇಕ ವರುಷಗಳಿಂದ ಪ್ರತಿನಿಧಿಗಳು ಈ ಸಭೆಯಲ್ಲಿ ಪ್ರಾರ್ಥಿಸಿಕ್ಕೊಳ್ಳುತ್ತಿದ್ದಂತೆ ಮೈಸೂರು ದೇಶೀಯರಿಗೇನೇ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಇಟ್ಟು ಇರುವೆದಾಗಿ ತಮ್ಮ ಉಪನ್ಯಾಸದಲ್ಲಿ ಅಪ್ಪಣೆಕೊಡಿಸಿದ್ದಕ್ಕಾಗಿ ನಮ್ಮನ್ನಾಳುವ ಮಹಾಸ್ವಾಮಿಯವರಿಗೆ, ಇಂಥಾ ಉತ್ಕೃಷ್ಟವಾದ ವರಪ್ರದಾನವೆನ್ನ ಮಾಡಿದ್ದಕ್ಕಾಗಿ ಭಕ್ತಿಪೂರ್ವಕವಾಗಿ ವಂದನೆಗಳನ್ನ ಅರ್ಪಿಸುತ್ತೇವೆ.

ಕೀರ್ತಿಶೇಷರಾದ ದಿವಾಣ ಸರ್. ಕೆ. ಶೇಷಾದ್ರಿ ಐಯ್ಯರ್‌ರವರ ಕಾಲದಲ್ಲಿ ಚರ್ಚೆಗೆ ಪ್ರಾರಂಭವಾದ, ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ವರಮಾನದಲ್ಲಿ ಖರ್ಚು ಜಾತಾ / ನಿಂತ ಮೊಬಲಗನ್ನು ಮೈಸೂರು ಸರ್ಕಾರಕ್ಕೆ ಕೊಡುವಂತೆ ತಮ್ಮ ಔದಾರ್ಯವೆನ್ನ ತೋರಿಸಿದ್ದಕ್ಕಾಗಿ, ಬ್ರಿಟಿಷ್ ಸರ್ಕಾರದವರಿಗಾಗಿ ನಾವುಗಳು ಅನೇಕ ವಂದನೆಗಳನ್ನ ಅರ್ಪಿಸುತ್ತೇವೆ. ಮತ್ತು ಈ ವ್ಯವಸ್ಥೆಯು ತಮ್ಮ ದಿವಾಣಗಿರಿಯಲ್ಲಿ ಉಂಟಾದದ್ದಕ್ಕಾಗಿ ತಮಗೂಕೂಡಾ ವಿಶ್ವಾಸಪೂರ್ವಕವಾಗಿ ವಂದನೆಗಳನ್ನ ಮಾಡುತ್ತೇವೆ.

(37) ಮೂವತ್ತೇಳು ವರುಷಗಳಿಂದಲೂ, ಈ ಸಂಸ್ಥಾನದ ಪ್ರಜೆಗಳ ಕಷ್ಟಸುಖಗಳನ್ನೂ ತಾರತಮ್ಯವನ್ನೂ ತಿಳಿದು ಪ್ರತಿ ಅಧಿಕಾರದಲ್ಲೂ, ತಕ್ಕಮಟ್ಟಿಗೆ ಪ್ರಜೆಗಳ ಶ್ರೇಯೋಭಿವೃದ್ಧಿಯನ್ನು ಕೋರುತ್ತಾ ಕಾಪಾಡಿಕೊಂಡು ಬಂದ ತಮಗೆ ಪ್ರಧಾನಶಿರೋಮಣಿ ಎಂಬ ಅನ್ಯಾದೃಶವಾದ ಬಿರುದನ್ನ ನಮ್ಮನ್ನಾಳುವ ಮಹಾಸ್ವಾಮಿಯವರು ದಯೆಪಾಲಿಸಿರುವದೇ ತಮ್ಮ ಅಮೌಲ್ಯವಾದ ಸದ್ಗುಣವನ್ನು, ಘನತರವಾದ ಸಾಮರ್ಥ್ಯವನ್ನೂ ಕೂಡಾ ಪ್ರಚುರಪಡಿಸುತ್ತೆ.

ತಾವು ಈಗ ವಿಶ್ರಾಂತಿಸುಖವನ್ನು ಪಡಿಯಬೇಕೆಂದು ದಿವಾಣಗಿರಿಯಿಂದ ಮನಃಪೂರ್ವಕವಾಗಿ ನಿವೃತ್ತರಾಗುತ್ತೀರೆಂತ ಕೇಳುವದು ನಮಗೆಲ್ಲಾ ಮನಸ್ಸಿಗೆ ವಿಷಾದಕರವಾಗಿದೆ. ತಾವು ಪ್ರಜಾಸಾಮಾನ್ಯಕ್ಕೆ ಶ್ರೇಯಸ್ಕರವಾದ ವಿಷಯಗಳಲ್ಲಿ ಮುಂದೆ ಬರತಕ್ಕ ದಿವಾಣರವರಿಗೂ, ನಮ್ಮನ್ನಾಳುವ ಮಹಾಸ್ವಾಮಿಯವರಿಗೂ ತಮ್ಮ ಅನುಭವದ ಫಲವೆನ್ನು ಕಾಲೋಚಿತವಾಗಿ ಸೂಚಿಸುತ್ತಾ ದೀರ್ಘಾಯುರಾರೋಗ್ಯರಾಗಿ ಇರಬೇಕೆಂದು ದೇವರ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇವೆ.

ತಾ॥ 1-11-12.

ಅಂಬ್ಳಿ ಅಣ್ಣಯ್ಯಪಂಡಿತರು,
ವಗ್ಗೈರೆ ಪ್ರತಿನಿಧಿಗಳು.